**ಅಧ್ಯಾಯ-4**

# ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಅಂತರ್ವೇಶನ ಮತ್ತು ವೈವಿಧ್ಯತೆಗೆ ಕಣ್ತೆರೆಸುವುದು
# -ಮಿಚೆಲ್ ಟರ್ನರ್ ಮತ್ತು ಅಮಂಡಾ ಮೊರ್ಗನ್

ಮಕ್ಕಳು ಮತ್ತು ಕುಟುಂಬಗಳಿಗೆ ಭಿನ್ನತೆ ಮತ್ತು ವೈವಿಧ್ಯತೆಯ ತಿಳಿವು ಬೆಳೆಸಿಕೊಳ್ಳಲು ಅವಕಾಶ ಕಲ್ಪಿಸುವ ಆರಂಭಿಕ ಬಾಲ್ಯದ ಹಿನ್ನೆಲೆಗಳನ್ನು ಸೃಷ್ಟಿಸಲು ಶಿಕ್ಷಕರು ಏನು ಮಾಡಬಹುದು?

**ಪ್ರಮುಖ ಕಲಿಕೆಗಳು**

- ಸಮಕಾಲೀನ ಆಸ್ಟ್ರೇಲಿಯಾದಲ್ಲಿ ವೈವಿಧ್ಯತೆ ಎನ್ನುವುದು ಆರಂಭಿಕ ಬಾಲ್ಯ ಶಿಕ್ಷಣದ ಒಂದು ವೈಶಿಷ್ಟತೆ.
- ಮಕ್ಕಳ ಹಕ್ಕುಗಳ ಮೇಲಿನ ವಿಶ್ವಸಂಸ್ಥೆಯ ಒಪ್ಪಂದವು ನಿಗದಿಪಡಿಸಿದ ಸಿದ್ಧಾಂತಗಳ ಪ್ರಕಾರ ಎಲ್ಲ ಮಕ್ಕಳೂ ಸ್ವೀಕೃತರಾಗುವ ಮತ್ತು ಗೌರವ ಪಡೆಯುವ ಹಕ್ಕನ್ನು ಹೊಂದಿರುತ್ತಾರೆ.
- ಎಲ್ಲ ಮಕ್ಕಳಿಗೂ ತಮ್ಮ ತಮ್ಮ ಸ್ಥಳೀಯ ಮತ್ತು ವಿಶಾಲ ಸಮುದಾಯಗಳ ವೈವಿಧ್ಯತೆಯ ಬಗ್ಗೆ ಮೆಚ್ಚುಗೆ ಮತ್ತು ಗೌರವವನ್ನು ಬೆಳೆಸಿಕೊಳ್ಳುವ ಅವಕಾಶ ಇರುವುದು ಮುಖ್ಯ.
- ಆರಂಭಿಕ ಬಾಲ್ಯ ಸನ್ನಿವೇಶಗಳಲ್ಲಿ ಕೆಲಸಮಾಡುವ ಸಮಕಾಲೀನ ಶಿಕ್ಷಕರಿಗೆ ವೈವಿಧ್ಯತೆಯ ಬಗ್ಗೆ ಒಂದು ಸಮಗ್ರ ನಿಲುವು ಅಳವಡಿಸಿಕೊಳ್ಳುವುದನ್ನು ಒಂದು ಕಾರ್ಯತಂತ್ರವಾಗಿ ಉತ್ತೇಜಿಸಲಾಗಿದೆ.

.

## ಪರಿಚಯ

ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ವೈವಿಧ್ಯತೆ ಮತ್ತು ಒಳಗೊಳ್ಳುವಿಕೆ "ರಂಕುರಾಟಣ ಮತ್ತು ಉಯ್ಯಾಲೆ, ಜೋಡಿ ರೆಕ್ಕೆಗಳು, ಮೀನು ಮತ್ತು ಚಿಪ್ಸ್, ಜಿಗಿತ ಮತ್ತು ಕುಣಿತ, ಸಾಕ್ಸ್ ಮತ್ತು ಶೂ, ಉಪ್ಪು ಮತ್ತು ಕಾಳುಮೆಣಸು, ಸ್ಟ್ರಾಬೆರಿ ಮತ್ತು ಕ್ರೀಮ್, ಪೈ ಮತ್ತು ಸಾಸ್, ಮೂ ಎನ್ನುವುದರಲಿರುವ ಊ" ಗಳಂತೆ ಜೊತೆಯಾಗಿರುವುವು.(ಮೆಕ್ ಕಿಮೀ, 2010, p-1). ವಿಭಿನ್ನ ಗುಣಗಳು ಮತ್ತು ಅಗತ್ಯಗಳ ವಿಸ್ತಾರವಾದ ಹರವಿಗೆ ಸ್ಪಂದಿಸುವ ಅಂತರ್ವೇಶಿತ ಕಲಿಕಾ ವಾತಾವರಣ ನಿರ್ಮಿಸುವುದು ಒಂದು ಸವಾಲಾಗಬಹುದು ಮತ್ತು ಕೆಲವೊಮ್ಮೆ ಸೀಮಿತ ಅಥವಾ ಕಳಪೆ ಫಲಿತಾಂಶವನ್ನು ಕೊಡಬಲ್ಲ ಪ್ರಯಾಸಕರ ಪ್ರಯತ್ನ ಎಂದು ಸಮರ್ಥರಾದ ಆರಂಬಿಕ ಬಾಲ್ಯ ಶಿಕ್ಷಕರು ಅರ್ಥಮಾಡಿಕೊಂಡಿದ್ದಾರೆ (Petriwskyj, Thorpe & Tayler, 2014).

ಸಾಂಪ್ರದಾಯಿಕವಾಗಿ ಬಾಲ್ಯದ ಆರಂಭಿಕ ವರ್ಷಗಳ ಮುಖ್ಯವಾಹಿನಿಯಲ್ಲಿರುವ ತರಗತಿಯ ಶಿಕ್ಷಣವು ವಿಶೇಷ ಅಗತ್ಯಗಳನ್ನು ಹೊಂದಿರುವ ಮಕ್ಕಳ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿರುತ್ತದೆ. ಇದರಲ್ಲಿ ಅಂಗವೈಕಲ್ಯ ಉಳ್ಳವರು, ಅಥವಾ ಆಟಿಸಂ ಮತ್ತು 'ಅಪಾಯದಲ್ಲಿರುವ' ಮಕ್ಕಳು ಅಥವಾ ಸಮಾಜೋ-ಆರ್ಥಿಕ ಸನ್ನಿವೇಶಗಳಲ್ಲಿ ಅಥವಾ ಭೌಗೋಳಿಕವಾಗಿ ಪ್ರತ್ಯೇಕವಾಗಿರುವ ಅಂಶಗಳಿಗೆ ಸಂಬಂಧಿಸಿದಂತೆ ಪ್ರತಿಕೂಲ ಸ್ಥಿತಿಯಲ್ಲಿರುವ ಮಕ್ಕಳು ಸೇರಿದ್ದಾರೆ. (ಪೆಟ್ರಿವೆಸ್ಕಿ, 2010). ಪೆಟ್ರಿವೆಸ್ಕಿಯವರ (2010) ಸಂಶೋಧನೆಯು ಒಳಗೊಳ್ಳುವ ಶಿಕ್ಷಣದ ಇನ್ನೂ ಕೆಲವು ಅಂಶಗಳ ಕಡೆಗೆ ವಿಸ್ತರಿಸುತ್ತದೆ. ಅವುಗಳೆಂದರೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಇಂಗ್ಲೀಷ್ ದ್ವಿತೀಯ ಭಾಷೆಯಾಗಿರುವುದು, ಭಾವಾಘಾತ ಸಂಬಂಧಿತ ಹಾಗೂ ಶೈಕ್ಷಣಿಕ ಹಕ್ಕುದಾರರ ಆರ್ಥಿಕ ಹಿನ್ನೆಲೆಗಳು.


ಮುಖ್ಯ ವಾಹಿನಿಯ ತರಗತಿಗಳಲ್ಲಿ ಪರಿಣಾಮಕಾರಿಯಾದ, ಸಮನ್ವಯ ಬೋಧನಾಶಾಸ್ತ್ರ ಮತ್ತು ಕಾರ್ಯಕ್ರಮಗಳನ್ನು ಆರಂಭಿಕ ಬಾಲ್ಯದ ಶಿಕ್ಷಕರು ಹೇಗೆ ನೀಡಬಹುದು ಎಂಬುದನ್ನು ವಿವರಿಸುವ ರೀತಿಯಲ್ಲಿ ಈ ಅಧ್ಯಾಯವನ್ನು ವಿನ್ಯಾಸಗೊಳಿಸಲಾಗಿದೆ. ಸಾಮಾನ್ಯವಾಗಿ ಮಕ್ಕಳಿಗೆ ನ್ಯೂನತೆ ಅಥವಾ ನೈದಾನಿಸಲ್ಪಟ್ಟ (diagnosed) ದೈಹಿಕ ಅಸಮರ್ಥತೆ ಇದ್ದಾಗ (ಗಾಲಿ ಕುರ್ಚಿ ಅಥವಾ ಶ್ರವಣ ಯಂತ್ರದ ಅಗತ್ಯವಿರುವವರು) ಸಾಮಾನ್ಯ ತರಗತಿಯ ಶಿಕ್ಷಕರು ಹೊರಗಿನ ಸಂಸ್ಥೆಗಳಿಂದ ಬೆಂಬಲವನ್ನು ಪಡೆಯಬಹುದು ಅಥವಾ ಸಹಾಯಕ ತಂತ್ರಜ್ಞಾನದ ಸಹಾಯ (ಫಾರ್ಲಿನ್, ಚೇಂಬರ್ಸ್, ಲೋರ್ಮನ್, ಡೆಪ್ಲರ್ ಮತ್ತು ಶರ್ಮಾ, 2013) ಪಡೆಯಬಹುದು. ಆದರೆ ಒಂದು ಮಗು 'ವಿಲಕ್ಷಣ', ಆತನ ಕಲಿಕಾ ಪ್ರಗತಿ ನಿಧಾನ ಅಥವಾ ಅವರ ವರ್ತನೆ ನಿಭಾಯಿಸಲು ಕಷ್ಟ ಎಂದು ಶಿಕ್ಷಕರು ಆಲೋಚಿಸಿದರೆ, ಒಳಗೊಳ್ಳುವ ಕ್ರಮಗಳನ್ನು ಅಳವಡಿಸಿಕೊಳ್ಳುವುದು, ಅದಕ್ಕಾಗಿ ಯೋಜನೆ ರೂಪಿಸುವುದು ಮತ್ತು ಅನುಷ್ಠಾನಕ್ಕೆ ತರುವುದು ಕಷ್ಟವಾಗಬಹುದು. (ಪೆಟ್ರಿವಸ್ಕೀ, 2010). ನವಶಿಕ್ಷಕರು ಮುಖ್ಯವಾಹಿನಿಯ ಆರಂಭಿಕ ಬಾಲ್ಯ ಶಿಕ್ಷಣದ ತರಗತಿಯಲ್ಲಿ ಅನುಷ್ಠಾನಗೊಳಿಸಲು ಮತ್ತು ವಿದ್ಯಾರ್ಥಿಗಳು ಹಾಗೂ ಕುಟುಂಬ ಸಹಾಯಾರ್ಥಿಗಳಿಗೆ ಹೆಚ್ಚು ಸ್ಪಂದನಾಶೀಲ ಹಾಗೂ ಅಂತರ್ವೇಕ್ಷಿತರಾಗಿರಲು ಸಹಾಯವಾಗುವಂತೆ ಈ ಕೆಳಗಿನ ಮಾಹಿತಿ, ಯೋಚನೆ ಮತ್ತು ಚಟುವಟಿಕೆಗಳನ್ನು ಸಾಮಾನ್ಯ 'ಬೋಧನಾ ಟೂಲ್-ಕಿಟ್' ಆಗಿ ವಿನ್ಯಾಸಗೊಳಿಸಲಾಗಿದೆ.

## ವೈವಿಧ್ಯತೆ

ಸಮಕಾಲೀನ ಆಸ್ಟ್ರೇಲಿಯಾದಲ್ಲಿ ವೈವಿಧ್ಯತೆ ಎನ್ನುವುದು ಆರಂಭಿಕ ಬಾಲ್ಯ ಶಿಕ್ಷಣದ ಲಕ್ಷಣವಾಗಿದೆ. ಆರಂಭಿಕ ಬಾಲ್ಯದ ಶೈಕ್ಷಣಿಕ ಸನ್ನಿವೇಶಗಳಲ್ಲಿ ತೊಡಗಿಸಿಕೊಳ್ಳುವ ಮಕ್ಕಳು ವಿಸ್ತಾರವಾದ ವ್ಯಾಪ್ತಿಯ ಸಾಮಾಜಿಕ, ಆರ್ಥಿಕ, ಸಾಮರ್ಥ್ಯಗಳ ಗುಂಪಿನಿಂದ ಬರುವುದಲ್ಲದೆ ತಮ್ಮೊಡನೆ ಸಾಕಷ್ಟು ವಿಭಿನ್ನ ಜೀವನಾನುಭವಗಳನ್ನು ತಂದಿರುತ್ತಾರೆ. ಕ್ವೀನ್ಸ್‌ಲ್ಯಾಂಡ್ ಸರ್ಕಾರದ ಶಿಕ್ಷಣ ಇಲಾಖೆ (2018) ವ್ಯಾಖ್ಯಾನ ಮಾಡಿರುವಂತೆ, ವೈವಿಧ್ಯತೆ ಎಂದರೆ ಸಂಸ್ಕೃತಿ, ಭಾಷೆ, ಪ್ರದೇಶ, ಆರ್ಥಿಕತೆ, ಕಲಿಕೆ, ಸಾಮರ್ಥ್ಯಗಳು ಮತ್ತು ಲಿಂಗತ್ವದಂತಹ ವೈಯಕ್ತಿಕ ಭಿನ್ನತೆಗಳನ್ನು ಒಳಗೊಳ್ಳುವುದು. ಅನೇಕ ಸಾಹಿತ್ಯ ರಚನೆಗಳಲ್ಲಿ ವೈವಿಧ್ಯತೆಯ ಅರ್ಥವ್ಯಾಪ್ತಿಯನ್ನು ಮಂಡಿಸಲಾಗಿದೆ; ಅವುಗಳೆಂದರೆ ವಿಭಿನ್ನ ಸಾಮರ್ಥ್ಯ (ಆಶ್ಮಾನ್ ಮತ್ತು ಎಲ್ಕಿನ್ಸ್, 2005), ವಿವಿಧ ಕಲಿಯುವವರು(ಕೊಯೆನ್, ಕಾಮೆನುಯಿ ಮತ್ತು ಕಾರ್ನೈನ್, 2007 Coyne, Kame'enui & Carnine, 2007), ವಿವಿಧ ಕಲಿಕಾ ಹಕ್ಕುಗಳು (ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಕುರಿತಾಗಿರುವ ಸಂಘಟನೆ Organisation for Economic Co-operation and Development (OECD), 2006) ಮತ್ತು ವಿಭಿನ್ನ ತರಗತಿಗಳಲ್ಲಿರುವ ಕಲಿಯುವವರು (ಡೆಮ್ಸಿ ಮತ್ತು ಅರ್ಥರ್ ಕೆಲ್ಲಿ-2007), ಇವು ಭಿನ್ನತೆ-ವೈವಿಧ್ಯತೆಯ ಸಂಕೀರ್ಣ ಹಾಗೂ ಬಹುಆಯಾಮದ ಸ್ವರೂಪಗಳು ಮತ್ತು ಅದಕ್ಕೆ ಸಂಬಂಧಿಸಿದ ಅಧಿಕಾರದಲ್ಲಿರುವ ಅಸಮಾನತೆಯನ್ನು ಬಿಂಬಿಸುತ್ತವೆ. ಈ ಕಲ್ಪಿತ ರಚನೆಗಳ ಪ್ರತಿಪಾದನೆಗಳು ಮಕ್ಕಳನ್ನು ಸಾಮಾನ್ಯತೆಯ ಆಲೋಚನೆಯನ್ನಾಧರಿಸಿ ವರ್ಗೀಕರಣಮಾಡುವುದನ್ನು ದೂರವಿರಿಸಿ, ವಿಭಿನ್ನ ಗುಣಲಕ್ಷಣವುಳ್ಳ ಕಲಿಯುವವರನ್ನು ವೈವಿಧ್ಯಮಯ ಬೋಧನಾಕ್ರಮದಿಂದ ಬೆಂಬಲಿಸುವುದನ್ನು ಸೂಚಿಸುತ್ತವೆ. (ಗ್ರಹಾಂ 2007).

ಸಾಂಸ್ಕೃತಿಕ ಮತ್ತು ಜನಾಂಗೀಯ ಹಿನ್ನೆಲೆ, ಕುಟುಂಬಗಳ ರಚನೆ ಮತ್ತು ಗಾತ್ರದ ವಿಷಯದಲ್ಲಿ ಆಸ್ಟ್ರೇಲಿಯಾದ ಸಮಾಜವು ಹೆಚ್ಚು ಹೆಚ್ಚು ವೈವಿಧ್ಯಮಯವಾಗುತ್ತಿದೆ. (ಮೂರ್ 2008), ಮಕ್ಕಳ ವಿಕಾಸದ ಮಾರ್ಗಗಳು ಕೂಡ ಇನ್ನಷ್ಟು ವೈವಿಧ್ಯವಾಗಿವೆ. ಹೀಗೆ ಬದಲಾಗುತ್ತಿರುವ ವೈವಿಧ್ಯತೆಯಿಂದಾಗಿ ಪಾಲಕತ್ವ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಸಾಂಪ್ರದಾಯಿಕ ಬಾಲ್ಯದ ಅಭ್ಯಾಸಗಳ ಬಗೆಗೆ ಬೇಕಾಬಿಟ್ಟಿ ನಿಲುವು ತಳೆಯುವುದು ತಪ್ಪಿದೆ (ಫ್ಲೀರ್ 2003). ಬ್ರಾನ್ ಫೆನ್ ಬ್ರನ್ನರ್ ಅವರ ಸಾಮಾಜಿಕ ಪರಿಸರಾತ್ಮಕ ಉಪಗಮನವು ವಿಕಸನಗೊಳ್ಳುತ್ತಿರುವ ಮಗುವನ್ನು ಈ ವೈವಿಧ್ಯಮಯ ಹಿನ್ನೆಲೆಯಲ್ಲಿ ಕಲ್ಪಿಸಿಕೊಳ್ಳಲು ಸಹಾಯಮಾಡುತ್ತದೆ ಏಕೆಂದರೆ ಈ ಮಾದರಿಯು " ಮಾನವ ವಿಕಾಸ

ಮತ್ತು ಶಿಕ್ಷಣವನ್ನು ಪ್ರಭಾವಿಸಬಲ್ಲ ವಿಶಾಲ ವ್ಯಾಪ್ತಿಯ ಸಾಂದರ್ಭಿಕ ಅಂಶಗಳನ್ನು" ಗುರುತಿಸಲು ಸಹಾಯಮಾಡುತ್ತದೆ (ಓಡಮ್ ಮತ್ತು ಇತರರು, 2004, ಪುಟ 18). ಈ ಮಾದರಿಯಲ್ಲಿ ಮಗುವು ಅನೇಕ ಏಕಕೇಂದ್ರಿತ ಪದರಗಳ ನಡುವೆ ಇರುತ್ತದೆ. ಸುತ್ತುವರಿದಿರುವ ಪದರಗಳು ಕೇಂದ್ರದಿಂದ ಹೊರಬಿದ್ದಿದ್ದು ಮಗುವಿನ ಜೀವನ ಪಯಣದ ಯಾವುದೇ ಸಮಯದಲ್ಲಿ ಜೊತೆಗೂಡಿರುವ ವಿವಿಧ ಸಂದರ್ಭಗಳನ್ನು ಪ್ರತಿಬಿಂಬಿಸುತ್ತವೆ. ಮಗು ಮತ್ತು ಸುತ್ತುವರಿದಿರುವ ಪದರಗಳ ನಡುವಿನ ಸಂಬಂಧಗಳು ಗತಿಶೀಲವಾಗಿರುತ್ತವೆ (.dynamic) ಎಂದು ಪರಿಗಣಿಸಲಾಗುತ್ತದೆ.




**ಚಿತ್ರ 4.1: ಬ್ರನ್ ಫೆನ್ ಬ್ರೆನರ್ ಅವರ ಸಾಮಾಜಿಕ ಪರಿಸರಾತ್ಮಕ ಮಾದರಿ**

ಈ ಮಾದರಿಯಲ್ಲಿ ಮಗುವನ್ನು ಕೇಂದ್ರವಾಗಿರಿಸಿದ್ದು ಮಗುವಿನ ವಿಶೇಷಲಕ್ಷಣಗಳಾದ  ವಯಸ್ಸು, ಆರೋಗ್ಯ ಮತ್ತು ವ್ಯಕ್ತಿತ್ವ ವಿಶೇಷಕಗಳು ಅಳಕಗೊಂಡಿರುತ್ತವೆ. ಮಗುವಿಗೆ ನಿಕಟವಾಗಿರುವ ವ್ಯವಸ್ಥೆಯನ್ನು ಸೂಕ್ಷ್ಮ ವ್ಯವಸ್ಥೆ ಎಂದು ಕರೆಯಲಾಗುತ್ತದೆ ಮತ್ತು ಇದರಲ್ಲಿ ಮಗುವಿನ ಸುತ್ತ ಇರುವ ಕುಟುಂಬ, ವಿಸ್ತರಿತ ಕುಟುಂಬ ಮತ್ತು ಆರಂಭಿಕ ಬಾಲ್ಯದ ವ್ಯವಸ್ಥೆಗಳಂತಹ ಅಂಶಗಳು ಇರುತ್ತವೆ. ಈ ಅಂಶಗಳು ದೈಹಿಕ, ಸಾಮಾಜಿಕ, ಸಂವೇಗಾತ್ಮಕ ಮತ್ತು ಸಂಜ್ಞಾನಾತ್ಮಕವಾಗಿ ಮಗುವಿನ ಮೇಲೆ ಪ್ರಭಾವವನ್ನು ಬೀರುತ್ತವೆ. ಈ ಪದರದಲ್ಲಿ ಇತರ ಜನರೊಂದಿಗೆ ಇರುವ ಭಾವನಾತ್ಮಕ ಬಾಂಧವ್ಯವನ್ನು ಬ್ರನ್-ಫೆನ್-ಬ್ರೆನರ್ ಅವರು ಅತ್ಯಂತ ಗಮನಾರ್ಹ ಅಂಶವಾಗಿ ಪರಿಗಣಿಸುತ್ತಾರೆ. (ಬ್ರನ್-ಫೆನ್-ಬ್ರೆನರ್, 1979). ಈ ಮಾದರಿಯ ಮುಂದಿನ ಪದರ ಮಧ್ಯವ್ಯವಸ್ಥೆ ಎಂದು ಕರೆಯಲ್ಪಟ್ಟಿದ್ದು ಇದು ಸೂಕ್ಷ್ಮ ವ್ಯವಸ್ಥೆಯಲ್ಲಿನ ಸನ್ನಿವೇಶಗಳ ನಡುವಿನ ಸಮಾಯೋಜನೆಯನ್ನು ಸೂಚಿಸುತ್ತದೆ. (ಗ್ರೇಸ್, ಹೇಯ್ಸ್ ಮತ್ತು ವೈಸ್, 2017). ಸೂಕ್ಷ್ಮವ್ಯವಸ್ಥೆಯ ವ್ಯಾಪ್ತಿಯಲ್ಲಿಯೇ ಮಕ್ಕಳು ಎದುರಿಸಿದ ನಾನಾ ರೀತಿಯ ಸನ್ನಿವೇಶಗಳ ನಡುವೆ

ಉನ್ನತಮಟ್ಟದ ಹೊಂದಾಣಿಕೆಯ ಅನುಭವವನ್ನು ಪಡೆಯುವುದು ಅಪೇಕ್ಷಣೀಯ. ಒಂದು ಮಗು ತಾನು ಹಾಜರಾದ ಆರಂಭಿಕ ಬಾಲ್ಯ ಶಿಕ್ಷಣದ ಕೇಂದ್ರ ಮತ್ತು ತನ್ನ ಕೌಟುಂಬಿಕ ಜೀವನದ ನಡುವೆ ಅಪಸಮಾಯೋಜನೆ ಎದುರಿಸಿದರೆ ಕಲಿಯಲು ಇರುವ ಉತ್ತಮ ಅವಕಾಶಗಳನ್ನು ಅನುಭವಿಸಲು ಸಮರ್ಥರಾಗದೇ ಇರಬಹುದು. ಆದರೆ ಕೇಂದ್ರದ ಮೌಲ್ಯಗಳು ಮತ್ತು ಅವರ ಕೌಟುಂಬಿಕ ಜೀವನದ ನಡುವೆ ಉತ್ತಮವಾದ ಹೊಂದಾಣಿಕೆ ಇದ್ದರೆ ಸುಧಾರಿತ ಕಲಿಕಾ ಫಲಿತಾಂಶಗಳಿಗೆ ಅದು ದಾರಿ ಮಾಡಿಕೊಡಬಹುದು.

ಇದರ ಮಗ್ಗುಲಲ್ಲಿರುವ ಪದರವಾದ ಬಾಹ್ಯ ವ್ಯವಸ್ಥೆಯು ಮಕ್ಕಳು ನೇರವಾಗಿ ಒಳಗೊಂಡಿರದೇ ಇದ್ದರೂ ಅವರ ಮೇಲೆ ಪ್ರಭಾವ ಬೀರಬಲ್ಲ ವ್ಯವಸ್ಥೆಗಳು ಅಥವಾ ಸನ್ನಿವೇಶಗಳನ್ನು ಪ್ರತಿನಿಧಿಸುತ್ತದೆ. ಉದಾಹರಣೆಗೆ ಪಾಲಕರ ಉದ್ಯೋಗ. ಇದು ಮಗುವಿನ ಮೇಲೆ ಪ್ರಭಾವನ್ನು ಬೀರಬಹುದಾದ ಪಾಲಕರ ಕಡಿಮೆ ಆದಾಯ, ಅಧಿಕ ಕೆಲಸದ ಅವಧಿಗಳು ಮತ್ತು ಹೆಚ್ಚಿದ ಒತ್ತಡಗಳು ಹೀಗೆ ಅನೇಕ ಸಂಗತಿಗಳನ್ನು ಒಳಗೊಂಡಿರುತ್ತವೆ. ಕೊನೆಯ ಪದರವಾದ ಸ್ಥೂಲವ್ಯವಸ್ಥೆ ಇತರ ಎಲ್ಲಾ ಪದರಗಳ ಒಳಾಂಶಗಳ ಮೇಲೆ ಪ್ರಭಾವ ಬೀರಬಲ್ಲ ವಿಶಾಲವಾದ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃತ್ತಿಗಳು ಹಾಗೂ ಚಿಂತನೆಗಳನ್ನು ಸೂಚಿಸುತ್ತದೆ. ಈ ಪದರವು ಮಗುವು ಬದುಕುತ್ತಿರುವ ಸಮಾಜದ ಒಟ್ಟಾರೆ ಮೌಲ್ಯಗಳನ್ನು ಪ್ರತಿನಿಧಿಸುತ್ತದೆ ಮತ್ತು ಜೀವನದ ಎಲ್ಲ ಆಯಾಮಗಳ ಮೇಲೆ ಪ್ರಭಾವವನ್ನು ಬೀರುತ್ತದೆ. ಇದಕ್ಕೆ ಗ್ರೇಸ್, ಹೇಯ್ಸ್ ಮತ್ತು ವೈಸ್ (2017) ಶಿಕ್ಷಣ ಮತ್ತು ಉದ್ಯೋಗಕ್ಕೆ ಸಮಾನ ಅವಕಾಶ ನಿರಾಕರಿಸಿ ಮಹಿಳೆಯರನ್ನು ಪುರುಷರಿಗಿಂತ ಕೀಳಾಗಿ ಕಾಣುವುದರ ಪರಿಣಾಮವಾಗಿ ಹೆಣ್ಣು ಮಗುವಿಗೆ ಜೀವನದಲ್ಲಿ ಕಡಿಮೆ ಅವಕಾಶಗಳನ್ನು ದೊರಕಿಸುವ ಸಮಾಜವೊಂದರ ಉದಾಹರಣೆ ನೀಡುತ್ತಾರೆ

ಬ್ರನ್-ಫೆನ್-ಬ್ರೆನರ್ ಮಾದರಿ ಮಂಡಿಸುವ ಕೊನೆಯ, ಬಹಳ ಮುಖ್ಯವಾದ ಅಂಶವೇನೆಂದರೆ ಮಗುವನ್ನು ಜಡ ಭಾಗಿದಾರ ಎಂಬ ದೃಷ್ಟಿಯಿಂದ ಕಾಣಬಾರದು. ಮಗುವು ಕ್ರಿಯಾತ್ಮಕ ಜೀವಿಯಾಗಿದ್ದು ತಾನು ತೊಡಗಿಕೊಂಡಿರುವ ಪರಿಸರದ ಮೇಲೆ ಪ್ರಭಾವವನ್ನು ಬೀರುತ್ತದೆ. ಉದಾಹರಣೆಗೆ: ದೃಷ್ಟಿ ದೋಷವಿರುವ ಮಗುವಿನ ಪಾಲಕರು ಮಗು ಹೊಂದಬೇಕಿರುವ ಸೌಲಭ್ಯಗಳ ಜೊತೆ ಆರಂಭಿಕ ಶಿಶು ಕೇಂದ್ರಕ್ಕೆ ಬರುವ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳಬೇಕಾಗುತ್ತದೆ. ಬ್ರನ್-ಫೆನ್-ಬ್ರೆನರ್ ಅವರ ಸಾಮಾಜಿಕ ಪರಿಸರ ಮಾದರಿಯ ಪ್ರಕಾರ, ಮಕ್ಕಳು ಇದರಿಂದ ಪ್ರಭಾವಕ್ಕೆ ಒಳಗಾಗುತ್ತಾರೆ ಮತ್ತು ಇಂತಹ ಪ್ರಭಾವವನ್ನು ತಮ್ಮ ಸುತ್ತ ಇರುವ ಪರಿಸರ ಮತ್ತು ಜನರ ಮೇಲೆ ಬೀಳುವಂತೆ ಮಾಡುತ್ತಾರೆ. (ಗ್ರೇಸ್, ಹೇಯ್ಸ್ ಮತ್ತು ವೈಸ್ 2017). ಆದುದರಿಂದ ಮಕ್ಕಳನ್ನು ಸುತ್ತುವರಿದಿರುವ ಸಾಮಾಜಿಕ ಪರಿಸರಾತ್ಮಕ ಹಿನ್ನೆಲೆಯಲ್ಲೇ ಅವರನ್ನು ಗಮನಿಸುವುದು ಶಿಕ್ಷಕರಿಗೆ ಮಕ್ಕಳು ಮತ್ತು ಅವರ ವೈಯುಕ್ತಿಕ, ವಿಶಿಷ್ಟ, ವೈವಿಧ್ಯಮಯ ಸನ್ನಿವೇಶಗಳ ಸ್ಪಷ್ಟವಾದ ತಿಳುವಳಿಕೆ ಬೆಳೆಸಿಕೊಳ್ಳಲು ಸಹಾಯವಾಗುತ್ತದೆ

## ಒಳಗೊಳ್ಳುವಿಕೆ ( ಅಂತರ್ವೇಶನ)

ಆರಂಭಿಕ ಬಾಲ್ಯದ ಕ್ಷೇತ್ರದಲ್ಲಿ ಅಂತರ್ವೇಶನದ ಯೋಚನೆಗಳು ಕಳೆದ ಕೆಲವು ದಶಕಗಳಿಂದ ಕ್ರಮವಾಗಿ ರೂಪುಗೊಂಡಿವೆ ಮತ್ತು ನಿರಂತರವಾಗಿ ಮುಂದುವರಿದಿವೆ. ಇವೆಲ್ಲವೂ ಆಗಿರುವುದು ಚಾಲ್ತಿಯಲ್ಲಿರುವ ಸಾಮಾಜಿಕ ಬದಲಾವಣೆಯ ಹಿನ್ನೆಲೆಯಲ್ಲಿ. ಇದರ ಜೊತೆಗೆ ಸಾಮಾಜಿಕ ಮೌಲ್ಯಗಳು ಮತ್ತು ಚಿಂತನೆಗಳಲ್ಲಿಯೂ ಇದೇ ರೀತಿಯ ಬದಲಾವಣೆಗಳು ಆಗಿವೆ. ಅಂತರ್ವೇಶನದ ವ್ಯಾಖ್ಯಾನವು ಸಾಂಪ್ರದಾಯಿಕವಾಗಿ ಸಾಮಾನ್ಯ ತರಗತಿಗಳ (ಮುಖ್ಯವಾಹಿನಿ) ಜೊತೆ ಬೆರೆಯಲು ಸಿದ್ಧವಿರುವ (ಪೆಟ್ರಿವೆಸ್ಕಿ, 2010) ಮತ್ತು ಇಂಗ್ಲಿಷ್ ಭಾಷೆಯ ಬೋಧನೆ ಮತ್ತು ಅಂಗವೈಕಲ್ಯಕ್ಕೆ ಬೆಂಗಾವಲಾಗುವ ಸಾಮಾನ್ಯ ತರಗತಿಗಳಲ್ಲಿ ಒಟ್ಟಾಗಿಸುವ ಪ್ರಕ್ರಿಯೆಗೆ ಹೆಚ್ಚು ಗಮನ ನೀಡುತ್ತದೆ. (ಕುಕ್, ಕ್ಲೀನ್ & ಟೆಸ್ಸೀಯರ್, 2008). ಈ ವಿಚಾರಧಾರೆ ಬದಲಾಗಿದ್ದು, ಮಕ್ಕಳ ಸ್ವಕೀಯತೆಯ ಭಾವನೆಯನ್ನು ಬೆಂಬಲಿಸುವ ಪಠ್ಯಕ್ರಮ ಮತ್ತು ಬೋಧನಾತ್ಮಕ ವೈಶಿಷ್ಠತೆಯನ್ನು ಅಳವಡಿಸುವುದಕ್ಕೆ ಪಲ್ಲಟಗೊಂಡಿದೆ. (ಗಿಲ್ಲೀಸ್ ಮತ್ತು ಕ್ಯಾರಿಂಗ್ಟನ್, 2004). ಆರಂಭಿಕ ಬಾಲ್ಯದಲ್ಲಿಯೇ ವೈವಿಧ್ಯತೆ ಮತ್ತು ಭಿನ್ನತೆ, ಸಾಮರ್ಥ್ಯ ಹಾಗೂ

ಅಸಾಮರ್ಥ್ಯ ಮತ್ತು ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಬಹಿಷ್ಕರಣದ ಬಗೆಗೆ ಮೌಲ್ಯಗಳು ಹಾಗೂ ಯೋಚನೆಗಳು ಬದಲಾಗುತ್ತಿರುವುದು ಈ ಪಲ್ಲಟಗಳಿಗೆ ಕಾರಣ. (ಮೂರ್, ಮಾರ್ಕೋಸ್ & ರಾಬಿನ್ಸನ್, 2009).

## ವೈವಿಧ್ಯತೆ ಮತ್ತು ಭಿನ್ನತೆಯ ಬಗ್ಗೆ ಯೋಚನೆ

ಜಗತ್ತಿನ ಜನಸಂಖ್ಯೆಯು ಹೆಚ್ಚು ಚಲನಶೀಲವಾಗುತ್ತಿದ್ದು ಆಸ್ಟ್ರೇಲಿಯಾವೂ ಸೇರಿದಂತೆ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಬಹುಸಂಸ್ಕೃತಿಯ ಸಮಾಜಗಳು ಅದರಿಂದಾಗಿ ಜನಾಂಗೀಯ ಮತ್ತು ಸಾಂಸ್ಕೃತಿಕ ವೈವಿಧ್ಯತೆ ಹುಟ್ಟಿಕೊಂಡಿದೆ.. (ಅರ್ಬರ್, 2005). ಪ್ರತಿಯೊಬ್ಬರಿಗೂ ಅವರ ಪ್ರತ್ಯಕ್ಷಣಗಳು, ಮೌಲ್ಯಗಳು ಮತ್ತು ಚಿಂತನೆಗಳನ್ನು ರೂಪಿಸುವ ಅವರದೇ ಆದ ಸಾಂಸ್ಕೃತಿಕ ಚೌಕಟ್ಟು ಇರುತ್ತದೆ ಎಂಬ ಅರಿವು ಇದರಿಂದ ಹೊರಹೊಮ್ಮಿದೆ (ಗಾನ್ಝಲೆಜ್-ಮೆನಾ, 2004). ಓವರ್ (೨೦೦೫) ಅವರ ಪ್ರಕಾರ, ವೈಯುಕ್ತಿಕ ವಿಕಾಸ ಮತ್ತು ಸುಸ್ಥಿತಿಯನ್ನು ಅನುಭವಿಸಲು ಸಕಾರಾತ್ಮಕ ಸಾಮಾಜಿಕ ಅಂತರಕ್ರಿಯೆಗಳು ಮತ್ತು  ಸುದೀರ್ಘಾವಧಿಯ ಸಂಬಂಧಗಳು ಅತ್ಯಗತ್ಯ. ವೈಯುಕ್ತಿಕ ಬೆಳವಣಿಗೆ ಮತ್ತು ಜೀವನ ಪರ್ಯಂತದ ಕಲಿಕೆಗೆ ಧನಾತ್ಮಕವಾದ ಅನುಭವಗಳನ್ನು ಹೊಂದಲು ಮಕ್ಕಳು ವಿಶಿಷ್ಟವಾದ ಅಸ್ತಿತ್ವ ಮತ್ತು ವೈವಿಧ್ಯತೆಗಳನ್ನು ಅಳವಡಿಸಿಕೊಳ್ಳುವುದು ಬಹುಮುಖ್ಯ ಎಂಬುದನ್ನು ಇಂತಹ ಯೋಚನೆಗಳು ಒಪ್ಪಿಕೊಳ್ಳುತ್ತವೆ. ವೈವಿಧ್ಯ ಮತ್ತು ವಿಭಿನ್ನವಾದ ಬಹುಸಂಸ್ಕೃತಿಯ ಗುಂಪುಗಳ ಹಿನ್ನೆಲೆಯಲ್ಲಿ  ಮಕ್ಕಳು ತಮ್ಮ ಅಗತ್ಯಗಳನ್ನು ನಿಭಾಯಿಸುವುದನ್ನು ಬೆಂಬಲಿಸಲು ಒಳಗೊಳ್ಳುವಿಕೆಯ ಪರಿಣಾಮಕಾರಿ ಸನ್ನಿವೇಶಗಳನ್ನು ರೂಪಿಸುವುದು ಆರಂಭಿಕ ಬಾಲ್ಯದಲ್ಲಿ ವೈವಿಧ್ಯತೆಯ ಅಂತರ್ವೇಶನ ಉಪಗಮನದ ಮುಖ್ಯ ಗುರಿ .

## ಸಾಮರ್ಥ್ಯ ಮತ್ತು ಅಸಾಮರ್ಥ್ಯದ ಬಗೆಗೆ ಆಲೋಚನೆ

ಮಕ್ಕಳ ವಿಕಾಸದ ಮಾರ್ಗದಲ್ಲಿಯೇ ವೈವಿಧ್ಯತೆ ಇರುತ್ತದೆ. ಮಕ್ಕಳ ವಿಕಾಸ ಒಟ್ಟಾರೆ ಜನಸಂಖ್ಯೆಯಲ್ಲಿ ವಿವಿಧ ಪ್ರಮಾಣದಲ್ಲಿ ನಡೆಯುತ್ತದೆ. ಆದರೆ, ಶಾಲಾ ಸಂಸ್ಕೃತಿಯಲ್ಲಿ ಸಾಧಾರಣವಾಗಿ ರೂಪಿಸಲ್ಪಟ್ಟ  ವಿಕಾಸದ ಮಾರ್ಗಗಳನ್ನು ಅನುಸರಿಸಲು ಮಕ್ಕಳು ವಿಫಲವಾದರೆ ಅವರಿಗೆ ಕೆಲವೊಮ್ಮೆ ವಿಕಾಸಾತ್ಮಕ ಅಸಮರ್ಥತೆ ಇರುವವರು ಎಂಬ ಹಣೆಪಟ್ಟಿ ಹಚ್ಚುವ ಸಾಧ್ಯತೆ ಇರುತ್ತದೆ. ಅಸಮರ್ಥತೆ ಎನ್ನುವುದು ಸಮಗ್ರಾತ್ಮಕ ಪದವಾಗಿದ್ದು ಅಂತರರಾಷ್ಟ್ರೀಯ ಕಾರ್ಯಶೀಲತೆ, ಅಸಾಮರ್ಥ್ಯತೆ ಮತ್ತು ಆರೋಗ್ಯ ವರ್ಗೀಕರಣದಿಂದ (ವಿಶ್ವ ಆರೋಗ್ಯ ಸಂಸ್ಥೆ) ವ್ಯಾಖ್ಯಾನಿಸಲ್ಪಟ್ಟು ಮೂರು ಅಂಶಗಳು ಒಳಗೊಂಡಿರುತ್ತವೆ:

1. ದೌರ್ಬಲ್ಯ, ಎನ್ನುವುದು ದೇಹದ ಕಾರ್ಯನಿರ್ವಹಣೆ (ಉದಾಹರಣೆಗೆ, ಸಂವೇದನೆ ಅಥವಾ ಸಂಜ್ಞಾನಾತ್ಮಕ ಕಾರ್ಯನಿರ್ವಹಣೆ) ಮತ್ತು ದೇಹದ ರಚನೆಗಳ (ಉದಾಹರಣೆಗೆ, ಅಂಗ ಅಥವಾ ಅವಯವಗಳ ಕಾರ್ಯನಿರ್ವಹಣೆ) ದುರ್ಬಲತೆಯನ್ನು  ಸೂಚಿಸುತ್ತದೆ.
2. ಚಟುವಟಿಕೆಗೆ ಸಂಬಂಧಿಸಿದ ಮಿತಿಗಳು- ಅಂದರೆ ಸ್ವಯಂ ಕಾಳಜಿ, ಚಲನೆ ಮತ್ತು ಕಲಿಕೆಯಂತಹ ದಿನನಿತ್ಯದ ಚಟುವಟಿಕೆಗಳನ್ನು ಕೈಗೊಳ್ಳಲು ಇರುವ ಸವಾಲುಗಳು.
3. ಪಾಲ್ಗೊಳ್ಳುವಿಕೆಗೆ ನಿರ್ಬಂಧಗಳು - ಕುಟುಂಬ ಮತ್ತು ಸಮುದಾಯದ ವ್ಯವಸ್ಥೆಯ ಒಳಗೆ ಭಾಗಿಯಾಗಲು ಮಕ್ಕಳು  ಪ್ರಯತ್ನಿಸುವುದರಲ್ಲಿ ನಿರ್ಬಂದದ ಅನುಭವಗಳು.

:

ಇತ್ತೀಚಿನ ದಿನಗಳಲ್ಲಿ ಅಸಮರ್ಥತೆಯ ಆಲೋಚನೆಯ ಸುತ್ತ ಯಾವುದು 'ಸಾಮಾನ್ಯ' (normal') ಎನ್ನುವ ಸಾಂತತ್ಯದ ಬಗ್ಗೆ ಮಾರ್ಪಡಿಸಿದ ಆಲೋಚನೆಗಳು ಹೊರಹೊಮ್ಮಿವೆ. ಅಸಮರ್ಥತೆಯ ಜೊತೆಗೆ ಸಾಮಾಜಿಕ ಮತ್ತು ಪರಿಸರಕ್ಕೆ ಸಂಬಂಧಿಸಿದ ಅಂಶಗಳ ಪರಿಣಾಮಗಳನ್ನು ಹೆಚ್ಚುವರಿ ಅಂಶಗಳಾಗಿ ಪರಿಗಣಿಸಬೇಕಾಗುತ್ತದೆ ಮತ್ತು ಯಾವುದನ್ನು ಸಾಮಾನ್ಯ ಎಂದು ವ್ಯಾಖ್ಯಾನಿಸಲಾಗಿರುವುದೋ ಅದನ್ನು ಪ್ರಶ್ನಿಸಬೇಕಾಗುತ್ತದೆ. ಉದಾಹರಣೆಗೆ ಗಾಲಿ ಕುರ್ಚಿಯ ಸೌಲಭ್ಯದ ಪ್ರಮಾಣವನ್ನು ಹೆಚ್ಚಿಸುವುದರಿಂದ ಗಾಲಿ ಕುರ್ಚಿ ಬಳಕೆದಾರರು ಹೆಚ್ಚಿನ ಸೌಲಭ್ಯಗಳನ್ನು ಪಡೆದುಕೊಳ್ಳಲು ಮತ್ತು ಆ ಮೂಲಕ ಜೀವನಾನುಭವವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಇಂತಹ ಒಳಗೊಳ್ಳುವಿಕೆಯ ಕ್ರಮಗಳು **ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಪ್ಪಂದದ** 23ನೇ ವಿಧಿಯನ್ನು ಅನುಸರಿಸಲು ದಾರಿಯಾಗುತ್ತದೆ. ಈ ಒಪ್ಪಂದದ ಪ್ರಕಾರ ಅಂಗವಿಕಲತೆಯನ್ನು ಹೊಂದಿರುವ ಮಕ್ಕಳು ಅವರ ಪರಿಸ್ಥಿತಿಗೆ ತಕ್ಕಂತೆ ಸೂಕ್ತ ಸಹಾಯದೊಂದಿಗೆ ವಿಶೇಷ ಕಾಳಜಿಯ ಹಕ್ಕನ್ನು ಕೂಡ ಪಡೆದಿರುತ್ತಾರೆ. ಇದು ಮಕ್ಕಳ ಸಾಮಾಜಿಕ ಏಕತೆ ಮತ್ತು ವೈಯಕ್ತಿಕ ಅಭಿವೃದ್ಧಿಯನ್ನು ಪ್ರೋತ್ಸಾಹಿಸುತ್ತದೆ.

## ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಹೊರಗಿಡುವಿಕೆ** ಬಗ್ಗೆ ಯೋಚನೆ

ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಸಾಮಾಜಿಕ ಬದಲಾವಣೆ ಅನುಭವಿಸಿದ್ದರೋ ಅವು ಸಮಾಜದ ಎಲ್ಲ ಸದಸ್ಯರಿಗೂ ಉಪಯುಕ್ತವಲ್ಲ. ಬದಲಾಗಿರುವ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಲಾಭ ಪಡೆದುಕೊಳ್ಳುವಲ್ಲಿ ಕೆಲವರು ವಿಫಲರಾಗಿರುತ್ತಾರೆ. ಅದಕ್ಕೆ ಬದಲಾಗಿ ಸಾಮಾಜಿಕವಾಗಿ ಹೊರಗಿಡಲ್ಪಟ್ಟು ಕಡಿಮೆ ಪ್ರಯೋಜನ ಪಡೆಯುತ್ತಾರೆ. (ಹರ್ಟ್ಸ್-ಮ್ಯಾನ್, 2002). 2015ರಲ್ಲಿ ಬಿಡುಗಡೆ ಮಾಡಲಾದ ಆಸ್ಟ್ರೇಲಿಯಾದ ಆರಂಬಿಕ ವಿಕಾಸದ ಗಣತಿಯ ಪ್ರಕಾರ, ಆಸ್ಟ್ರೇಲಿಯಾದಲ್ಲಿ ಶಾಲೆಗೆ ಪ್ರವೇಶ ಪಡೆದ ಐದು ಮಕ್ಕಳಲ್ಲಿ ಒಬ್ಬರು ಸಂಜ್ಞಾನಾತ್ಮಕ ಕೌಶಲ್ಯ ಮತ್ತು ಸಂವಹನವೂ ಸೇರಿದಂತೆ ಒಂದಕ್ಕಿಂತ ಅಧಿಕ ಕ್ಷೇತ್ರಗಳಲ್ಲಿ ವಿಕಾಸಾತ್ಮಕವಾಗಿ ಅಪಾಯದಲ್ಲಿದ್ದರು (ಶಾಹೇನಿಯನ್ & ವ್ಯಾಂಗ್, 2018).

(ಗಮನಿಸಿ **ಬಹಿಷ್ಕಾರ ಎನ್ನುವುದು ಸರಿಯಾದ ಪದವಾದರೂ ಇಲ್ಲಿ ಮಕ್ಕಳನ್ನು ಬಹಿಷ್ಕರಿಸುವುದಿಲ್ಲ, ಅವರನ್ನು ಮುಖ್ಯವಾಹಿನಿಯಿಂದ ದೂರ ಇಡಲಾಗುತ್ತದೆ. ಆದುದರಿಂದ - ಒಳಗೊಳ್ಳುವಿಕೆಗೆ ವಿರುದ್ಧವಾಗಿ- ಹೊರಗಿಡುವಿಕೆ ಎನ್ನುವುದು ಹೆಚ್ಚು ಸೂಕ್ತ.)

.

ಸಾಮಾಜಿಕ ಬದಲಾವಣೆಗಳು ಸಮುದಾಯಗಳು ಒಡೆದುಹೋಗುವಂತೆ ಮಾಡಿವೆ, ಪಾಲಕರ ಮೇಲೆ ಅತಿಯಾದ ಒತ್ತಡ ಉಂಟುಮಾಡಿದೆ ಹಾಗೂ ಮಕ್ಕಳು ಮತ್ತು ಕುಟುಂಬಗಳ ಅಗತ್ಯಗಳನ್ನು ನಿಭಾಯಿಸಲು ವ್ಯವಸ್ಥೆಗೆ ಸಾಧ್ಯವಾಗುತ್ತಿಲ್ಲ (ಮೂರ್ & ಫ್ರೈ, 2011). ಮಕ್ಕಳು ಅನೇಕ ಅಂಶಗಳಿಂದ ತೊಂದರೆಗೆ ಒಳಗಾದಾಗ ಸಾಮಾಜಿಕ ಹೊರಗಿಡುವಿಕೆ ಎದುರಿಸಬೇಕಾಗುತ್ತದೆ. ಇದರಿಂದಾಗಿ ಅವರಿಗೆ ಸಮಾಜದಲ್ಲಿ ಭಾಗಿಯಾಗಲು ಕಷ್ಟವಾಗುತ್ತದೆ (ಹರ್ಟ್ಸ್-ಮ್ಯಾನ್, 2002). ಇಂತಹ ಅಂಶಗಳು ನಿರುದ್ಯೋಗಿ ಕುಟುಂಬಗಳಲ್ಲಿ ಬೆಳೆಯುವುದು, ಅಲ್ಪಸಂಖ್ಯಾತ ಗುಂಪಿನ ಸದಸ್ಯರಾಗಿರುವುದು ಅಥವಾ ಒಬ್ಬರೇ ಪಾಲಕರೊಡನೆ ಜೀವಿಸುವುದು ಮುಂತಾದವನ್ನು ಒಳಗೊಂಡಿರುತ್ತವೆ. ಇದು ಮಗು ಬಡತನದಲ್ಲಿ ಬದುಕಬೇಕಾದ ಮತ್ತು ಸಾಮಾಜಿಕವಾಗಿ ಪ್ರತ್ಯೇಕಿಸಲ್ಪಡುವ ಅಪಾಯಕ್ಕೆ ದಾರಿಮಾಡುತ್ತದ (ಮೂರ್, ಮಾರ್ಕೋಸ್ ಮತ್ತು ರಾಬಿನ್ಸನ್, 2009).

ಸಾಮಾಜಿಕ ಒಳಗೊಳ್ಳುವಿಕೆ ಎನ್ನುವುದು ಸಾಮಾಜಿಕ ಹೊರಗಿಡುವುದಕ್ಕೆ ವಿರುದ್ಧವಾಗಿ ಕಂಡರೂ ಕೂಡ ಅದರಲ್ಲಿ ಇನ್ನೂ ಅನೇಕ ಸಂಗತಿಗಳು ಅಡಕವಾಗಿವೆ. ಸಾಮಾಜಿಕ ಸಮನ್ವಯತೆ ಎನ್ನುವುದು ಒಳಗೊಳ್ಳುವಿಕೆಯ ಸ್ಥಿತಿಯನ್ನು ಅನುಕೂಲಗೊಳಿಸಲು ಬೇಕಿರುವ ಕ್ರಿಯೆಗೆ ಒಂದು ಪರಪ್ರಭಾವಿ**, ಲಕ್ಷ್ಯಪೂರ್ಣ ವಿಧಾನವನ್ನು ಊಹಿಸುತ್ತದೆ.
(ಕರೌನಾ & ಮೆಕ್-ಡೊನಾಲ್ಡ್, 2018). ಶಿಶು ವಿಕಾಸ ಮತ್ತು ಕಲಿಕ ಮಾತ್ರವಲ್ಲದೆ ಸಾಮಾಜಿಕ ನ್ಯಾಯ ಹಾಗೂ ಸಾಮಾಜಿಕ ಒಳಗೊಳ್ಳುವಿಕೆಯ ಬಗೆಗೆ ಈಗಿನ ತಿಳುವಳಿಕೆ, ಆರಂಭಿಕ ಬಾಲ್ಯದ ಸಂಬಂಧಗಳು, ಅಂತರಕ್ರಿಯೆಗಳು ಮತ್ತು ಮಗುವಿನ ಜೀವನದ ಮೊದಲ ಅನುಭವಗಳು ಆರಂಭಿಕ ಹಂತದ ಮಿದುಳಿನ ಬೆಳವಣಿಗೆ ಹಾಗೂ ಭವಿಷ್ಯದ ಬದುಕಿನ ಫಲಿತಾಂಶದ ಮೇಲೆ ಗಣನೀಯವಾದ ಪ್ರಭಾವವನ್ನು ಬೀರುತ್ತದೆ ಎಂದು ಸೂಚಿಸುತ್ತವೆ (ಸೆಂಟರ್ ಫಾರ್ ಡೆವೆಲೊಪಿಂಗ್ ಚೈಲ್ಡ್, 2011; ಶಾಂಕಾಫ್ & ಫಿಲಿಪ್ಸ್, 2000). ಹೆಚ್ಚು ಸಮನ್ವಯ ಸಮಾಜವನ್ನು ಉತ್ತೇಜಿಸಲು ಮಿತಿಗಳನ್ನು, ಅಡತಡೆಗಳನ್ನು ಮತ್ತು ಸಾಮಾಜಿಕ ಆರ್ಥಿಕ ಅಂತರಗಳನ್ನು ತಗ್ಗಿಸುವುದು ಬಹುಮುಖ್ಯ (ಹೇಯ್ಸ್, ಗ್ರೇಯ ಮತ್ತು ಎಡ್ವರ್ಡ್ಸ್, 2008). ಒಳಗೊಳ್ಳುವಿಕೆಗೆ ಮಕ್ಕಳು ಮತ್ತು ಪ್ರೌಡರು ಮೌಲ್ಯಯುತ, ಗೌರವಯುತ ಹಾಗೂ ಸಮಾಜಕ್ಕೆ ಕೊಡುಗೆನೀಡುವ ಸದಸ್ಯರಂತೆ ಬಾಗವಹಿಸಲು ಸಾದ್ಯವಾಗುವುದು ಮಹತ್ವಪೂರ್ಣವಾಗಿದೆ.

( ** ಗಮನಿಸಿ: ಪ್ರೊ. ಧರಣೇಂದ್ರಯ್ಯ ಅವರ ಪದಕೋಶದಲ್ಲಿ proactive, ಎನ್ನುವುದಕ್ಕೆ ಪರಪ್ರಭಾವಿ ಎಂಬ ಪದವಿದೆ)
.

## ಆರಂಭಿಕ ವರ್ಷಗಳಲ್ಲಿ ಒಳಗೊಳ್ಳುವಿಕೆ

ಆಸ್ಟ್ರೇಲಿಯಾದಲ್ಲಿ ಬಾಲ್ಯಾವಸ್ಥೆಯ ಬಗ್ಗೆ ಸಲಹೆಯನ್ನು ನೀಡುವ ಪ್ರಮುಖ ಸಂಸ್ಥೆಯಾದ ಅರ್ಲಿ ಚೈಲ್ಡ್-ಹುಡ್ [ಇಸಿಎ](2016) ಪ್ರಕಾರ "ಒಳಗೊಳ್ಳುವಿಕೆ ಎಂದರೆ ಪ್ರತಿಯೊಂದು ಮಗುವಿಗೂ ಆರಂಭಿಕ ಬಾಲ್ಯ ಶಿಕ್ಷಣ ಮತ್ತು ಆರೈಕೆ ಯೋಜನೆಗಳಿಂದ, ಅರ್ಥಪೂರ್ಣವಾದ ಭಾಗವಹಿಸುವಿಕೆ ಮತ್ತು ಧನಾತ್ಮಕ ಫಲಿತಾಂಶಗಳ ಅನುಭವಗಳಿಗೆ ಅವಕಾಶ ಒದಗಬೇಕು" (ಪುಟ-2), ಒಳಗೊಳ್ಳುವಿಕೆ ಎನ್ನುವುದು ಗಮನಾರ್ಹವಾದುದು: ಏಕೆಂದರೆ ಇದು ಮಗುವಿನ ಬೆಳವಣಿಗೆಯ ಬಗ್ಗೆ ಪ್ರಚಲಿತ ಯೋಚನೆಗೆ ಅವಕಾಶ ನೀಡುತ್ತದೆ; ಆರಂಭಿಕ ಬಾಲ್ಯದ ಶಿಕ್ಷಣ ಮತ್ತು ಆರೈಕೆಯ (ಇಸಿಇಸಿ)ಯ ವಿಷಯದಲ್ಲಿರುವ ಕಡ್ಡಾಯ ಕಾನೂನುಗಳನ್ನು ಅನುಷ್ಠಾನಗೊಳಿಸುತ್ತದೆ; ಮಕ್ಕಳ ಹಕ್ಕುಗಳಿಗೆ ಬೆಂಬಲ ನೀಡುತ್ತದೆ ಮತ್ತು ಗುಣಮಟ್ಟದ ವೃತ್ತಿಪರ ಅಭ್ಯಾಸವನ್ನು ಬಿಂಬಿಸುತ್ತದೆ. ಇಸಿಎ, 2016). ಇದರ ಜೊತೆಗೇ ಒಳಗೊಳ್ಳುವಿಕೆ ವೈವಿಧ್ಯತೆಯನ್ನು ಒಪ್ಪಿಕೊಳ್ಳುವುದನ್ನು ಸುಲಭಗೊಳಿಸುತ್ತದೆ ಮತ್ತು ಇಸಿಇಸಿ ವ್ಯವಸ್ಥೆಯಲ್ಲಿ ಒಂದು ಮಗುವು ತನ್ನ ಸಂಪೂರ್ಣ ಸಾಮರ್ಥ್ಯವನ್ನು ಸಾಧಿಸದಂತೆ ಮಾಡಬಹುದಾದ ಅಡೆತಡೆಗಳನ್ನು ತಗ್ಗಿಸುತ್ತದೆ.
ತಮ್ಮ ವೈವಿಧ್ಯತೆಯ ಹೊರತಾಗಿಯೂ ಎಲ್ಲ ಮಕ್ಕಳಿಗೂ ಭಾಗವಹಿಸಲು ಸಮಾನ ಹಾಗೂ ಪ್ರಾಮಾಣಿಕವಾದ ಅವಕಾಶಗಳು ಸಿಕ್ಕಾಗ ಮತ್ತು ಪ್ರತಿದಿನದ ದಿನಚರಿಗಳಿಂದ, ಅಂತರಕ್ರಿಯೆಗಳಿಂದ, ಆಟ ಮತ್ತು ಕಲಿಕಾ ಅನುಭವಗಳಿಂದ ತಿಳುವಳಿಕೆ ಲಭ್ಯವಾದಾಗ ಒಳಗೊಳ್ಳುವಿಕೆ ಪರಿಪೂರ್ಣವಾಗುತ್ತದೆ (ಕ್ವೀನ್ಸ್-ಲ್ಯಾಂಡ್ ಸರ್ಕಾರ [ಶಿಕ್ಷಣ ಇಲಾಖೆ ಮತ್ತು ತರಬೇತಿ], 2017).

ಆರಂಭಿಕ ವರ್ಷಗಳು ಸೇರಿದಂತೆ ಎಲ್ಲ ಹಂತದ ಶಾಲಾ ಶಿಕ್ಷಣವನ್ನು ಉದ್ದೇಶಿಸಿದ ಕ್ವೀನ್ಸ್-ಲ್ಯಾಂಡ್ ಸರ್ಕಾರದ ಶಿಕ್ಷಣ ಇಲಾಖೆಯು ಅಭಿವೃದ್ಧಿಪಡಿಸಿದ (2018) ರಾಜ್ಯನೀತಿಯ ಹೇಳಿಕೆ ಪ್ರಕಾರ;

> ಒಳಗೊಳ್ಳುವ ಶಿಕ್ಷಣ ಎಂದರೆ ವಿದ್ಯಾರ್ಥಿಗಳು ತಮ್ಮದೇ ವಯೋಮಾನದ ಸಹಪಾಠಿಗಳ ಜೊತೆಗೆ, ಯಥೋಚಿತವಾಗಿ ಹೊಂದಿಸಿರುವ ಮತ್ತು ಅವರ ವೈಯಕ್ತಿಕ ಅಗತ್ಯಗಳಿಗೆ ತಕ್ಕಂತೆ ಸಿದ್ಧಪಡಿಸಿರುವ ಬೋಧನಾ ಕಾರ್ಯತಂತ್ರಗಳ ಬೆಂಬಲಗಳಿಂದ ಕಲಿಕೆಯಲ್ಲಿ ಸಂಪೂರ್ಣವಾಗಿ ಭಾಗಿಯಾಗುವ ಅವಕಾಶವನ್ನು ಪಡೆಯುವುದು.

ಒಳಗೊಳ್ಳುವ ಪ್ರಕ್ರಿಯೆಯು ಶಾಲಾ ಜೀವನದ ಎಲ್ಲ ಸ್ವರೂಪಗಳಲ್ಲಿ ಮಿಳಿತವಾಗಿರುತ್ತದೆ ಮತ್ತು ಅದಕ್ಕೆ ಸಂಸ್ಕೃತಿ, ರಾಜ್ಯನೀತಿಗಳು ಹಾಗೂ ಪ್ರತಿ ದಿನದ ಅಭ್ಯಾಸಗಳು ಬೆಂಬಲ ನೀಡುತ್ತವೆ.(ಪುಟ-1).

ಕ್ವೀನ್ಸ್-ಲ್ಯಾಂಡ್ ಪಠ್ಯಕ್ರಮ ಮತ್ತು ಮೌಲ್ಯಮಾಪನ ಪ್ರಾಧಿಕಾರ (Queensland Curriculum and Assessment Authority[QCAA] (2014)ದ ಪ್ರಕಾರ ಆರಂಭಿಕ ಬಾಲ್ಯದಲ್ಲಿ ಒಳಗೊಳ್ಳುವ ಸನ್ನಿವೇಶಗಳು "ಶಿಕ್ಷಕರು ವಯಸ್ಸು, ಲಿಂಗತ್ವ, ಧರ್ಮ, ಸಂಸ್ಕೃತಿ, ಸಮಾಜೋ-ಆರ್ಥಿಕ ಸ್ಥಾನಮಾನ, ಲೈಂಗಿಕ ಆದ್ಯತೆಗಳು, ಸಾಮರ್ಥ್ಯ ಅಥವಾ ಭಾಷೆಯ ಹೊರತಾಗಿಯೂ ಎಲ್ಲ ಕಲಿಕಾರ್ಥಿಗಳ ಪಾಲ್ಗೊಳ್ಳುವಿಕೆ ಮತ್ತು ಕಲಿಕೆಯನ್ನು ಸುಧಾರಿಸಲು ಸಕಲ ಪ್ರಯತ್ನಗಳನ್ನು ಮಾಡಬೇಕು. ಒಳಗೊಳ್ಳುವಿಕೆಯು ಸಮುದಾಯದಲ್ಲಿನ ಪ್ರತಿಯೊಬ್ಬರನ್ನೂ ಪಾಲ್ಗೊಳ್ಳುವಂತೆ ಮತ್ತು ಸಾಧನೆ ಮಾಡುವಂತೆ ಪ್ರೋತ್ಸಾಹಿಸುತ್ತದೆ" (ಪುಟ-1). ಆಸ್ಟ್ರೇಲಿಯಾ ಸರ್ಕಾರದ ಒಳಗೊಳ್ಳುವಿಕೆಯ ಪೂರಕ ಕಾರ್ಯಕ್ರಮಕ್ಕಾಗಿ ಸಾಕಷ್ಟು ಸೇವೆಗಳನ್ನು ನಿಭಾಯಿಸುವ ಕೆ.ಯು. ಮಕ್ಕಳ ಸೇವಾ ಸಂಸ್ಥೆ ಒಳಗೊಳ್ಳುವಿಕೆ ಎಂದರೆ ಏನು ಎನ್ನುವ ಬಗ್ಗೆ ಶಿಕ್ಷಕರು ಮತ್ತು ಸೇವೆಗಳಿಗೆ ಈ ಕೆಳಗಿನ ಮಾಹಿತಿ ಪಟ್ಟಿಯನ್ನು ಸೃಷ್ಟಿಸಿದೆ:

## ಆರಂಭಿಕ ವರ್ಷಗಳಲ್ಲಿ ಒಳಗೊಳ್ಳುವ ಪ್ರಕ್ರಿಯೆಗಾಗಿ ರಾಜ್ಯನೀತಿ ಹಾಗೂ ಕಾನೂನು ಅಗತ್ಯಗಳು:

ಆಸ್ಟ್ರೇಲಿಯಾದ ಶಾಲಾ ಪೂರ್ವ ಆರಂಭಿಕ ಬಾಲ್ಯ ವ್ಯವಸ್ಥೆ ರಾಷ್ಟ್ರೀಯ ಕಾನೂನು ಮತ್ತು ರಾಷ್ಟ್ರೀಯ ವಿಧಾಯಕಗಳ ಮೂಲಕ ನಿಯಂತ್ರಿಸಲ್ಪಟ್ಟಿದೆ. ಇದು ಅನುಮೋದಿತ ಸೇವಾದಾರರು ಮತ್ತು ಶಿಕ್ಷಕರಿಗೆ ಕಾನೂನು ನಿರ್ಬಂಧಗಳನ್ನು ನಿಗದಿ ಮಾಡುತ್ತದೆ ಮತ್ತು ರಾಜ್ಯ ಮತ್ತು ಪ್ರಾದೇಶಿಕ ನಿಯಂತ್ರಣ ಪ್ರಾಧಿಕಾರಗಳು ಮತ್ತು ಆಸ್ಟ್ರೇಲಿಯಾದ ಮಕ್ಕಳ ಶಿಕ್ಷಣ ಮತ್ತು ಸೇವಾ ಗುಣಮಟ್ಟ ಪ್ರಾಧಿಕಾರ [ACECQA]ದ ಅಧಿಕಾರ ಮತ್ತು ಕಾರ್ಯನಿರ್ವಹಣೆಯ ಬಗೆಗೆ ವಿವರಣೆಯನ್ನು ನೀಡುತ್ತದೆ. ಆಸ್ಟ್ರೇಲಿಯಾದಲ್ಲಿ ಲಾಂಗ್ ಡೇ ಕೇರ್, ಫ್ಯಾಮಿಲಿ ಡೇ ಕೇರ್, ಕಿಂಡರ್-ಗಾರ್ಟನ್/ಪ್ರಿಸ್ಕೂಲ್ ಮತ್ತು ಶಾಲಾ ಅವಧಿ ನಂತರದ ಸೇವಾ ಸೌಲಭ್ಯಗಳು ಸೇರಿದಂತೆ ಶಿಕ್ಷಣ ಮತ್ತು ಮಕ್ಕಳ ಸೇವಾ ಸೌಲಭ್ಯಗಳನ್ನು ಒದಗಿಸುವವರಿಗೆ ಕಾರ್ಯನಿರ್ವಹಣೆ ಮತ್ತು ಕಾನೂನು ಅಗತ್ಯಗಳ ಬಗೆಗೆ ಶಿಕ್ಷಣ ಮತ್ತು ಸೇವಾ ಸೌಲಭ್ಯಗಳ ರಾಷ್ಟ್ರೀಯ ಕಾನೂನು ಮತ್ತು ಶಿಕ್ಷಣ ಮತ್ತು ಸೇವಾ ಸೌಲಭ್ಯಗಳ ರಾಷ್ಟ್ರೀಯ ವಿಧಾಯಕಗಳ ವಿವರಗಳನ್ನು ಒದಗಿಸುತ್ತವೆ. ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಪ್ಪಂದದೊಂದಿಗೆ ತಳಕು ಹಾಕಿಕೊಂಡಿರುವ ರಾಷ್ಟ್ರೀಯ ಕಾನೂನು ಮತ್ತು ರಾಷ್ಟ್ರೀಯ ನಿಬಂಧನೆಗಳು ಬಾಲ್ಯ ಶಿಕ್ಷಣ ಮತ್ತು ಸೇವೆಗಳಿಗಾಗಿರುವ ರಾಷ್ಟ್ರೀಯ ಗುಣಮಟ್ಟ ಚೌಕಟ್ಟಿನ ಭಾಗಗಳಾಗಿವೆ. ಎಲ್ಲ ವಿದ್ಯಾರ್ಥಿಗಳೂ ಸಾಧನೆಯನ್ನು ಮಾಡಬೇಕು, ಸಾಮಾಜಿಕ ಮತ್ತು ನಾಗರಿಕ ಚಟುವಟಿಕೆಗಳಲ್ಲಿ ಭಾಗಿಯಾಗಬೇಕು(ACECQA, 2017). "ವೈವಿಧ್ಯ ಸನ್ನಿವೇಶಗಳು, ಸಾಂಸ್ಕೃತಿಕ ಹಿನ್ನೆಲೆಗಳು ಮತ್ತು ಸಾಮರ್ಥ್ಯಗಳ ಹೊರತಾಗಿಯೂ ಎಲ್ಲ ಮಕ್ಕಳ ಸಾಮರ್ಥ್ಯ ಮತ್ತು ಸಾಧಿಸುವ ಹಕ್ಕನ್ನು NQF ಮಾನ್ಯ ಮಾಡುತ್ತದೆ.(ACECQA, 2017, ಪು.10). ಇಂತಹ ಒಳಗೊಳ್ಳುವ ಸೇವಾ ವಿತರಣೆ ಮತ್ತು ಅಭ್ಯಾಸವು ಅರ್ಲಿ ಈಯರ್ಸ್ ಲರ್ನಿಂಗ್ ಫ್ರೇಮ್-ವರ್ಕ್ [EYLF] ಎಂಬ ರಾಷ್ಟ್ರೀಯ ಅನುಮೋದನೆಯನ್ನು ಪಡೆದ ಆರಂಭಿಕ ಬಾಲ್ಯ ಶಿಕ್ಷಣ ವ್ಯವಸ್ಥೆಗಾಗಿರುವ ಕಲಿಕಾ ಚೌಕಟ್ಟಿನಲ್ಲಿ ಅಡಕವಾಗಿದೆ. ಇದರ ಜೊತೆಗೆ ಅಂಗವಿಕಲತೆಯನ್ನು ಹೊಂದಿರುವ ವಿಭಿನ್ನ ಹಿನ್ನೆಲೆಗಳಿಂದ ಬಂದ ಮಕ್ಕಳ ಹಕ್ಕುಗಳಿಗಾಗಿ ಇಸಿಇಸಿ ಸೇವೆಗಳನ್ನು ಪಡೆಯಲು ಮತ್ತು ಭಾಗಿಯಾಗಲು ರಾಷ್ಟ್ರೀಯ ಮತ್ತು ರಾಜ್ಯ ಆಧಾರಿತ ಕಾಯ್ದೆಗಳನ್ನು ರೂಪಿಸಲಾಗಿದೆ. ಅವುಗಳೆಂದರೆ:

- ಅಂಗವಿಕಲತೆ ತಾರತಮ್ಯ ಕಾಯ್ದೆ 1992 (ಕಾಮನ್ವೆಲ್ತ್)
- ಶಿಕ್ಷಣಕ್ಕಾಗಿ ಅಂಗವಿಕಲತೆಯ ಗುಣಮಟ್ಟಗಳು (ಕಾಮನ್ವೆಲ್ತ್)
- ತಾರತಮ್ಯ ನಿರೋಧಕ ಕಾಯ್ದೆ 1991 (ಕ್ವೀನ್ಸ್ ಲ್ಯಾಂಡ್)
- ಮಕ್ಕಳ ರಕ್ಷಣಾ ಕಾಯ್ದೆ 1999 (ಕ್ವೀನ್ಸ್ ಲ್ಯಾಂಡ್)

- ಉದ್ಯೋಗ ಆರೋಗ್ಯ ಮತ್ತು ಭದ್ರತಾ ಕಾಯ್ದೆ 2011 (ಕ್ವೀನ್ಸ್ ಲ್ಯಾಂಡ್)

ವೈವಿಧ್ಯತೆ ಮತ್ತು ಒಳಗೊಳ್ಳುವಿಕೆಗೆ ಸಂಬಂಧಿಸಿದ ಕಾನೂನು ಅಗತ್ಯಗಳ ಬಗೆಗಿನ ಹೆಚ್ಚುವರಿ ಮಾಹಿತಿಗಳು ಈ ಲಿಂಕ್ ನಲ್ಲಿ ಲಭ್ಯ: Inclusion of children with disability.
ಕ್ವೀನ್ಸ್-ಲ್ಯಾಂಡ್ ಹಿನ್ನೆಲೆಯಲ್ಲಿ ಶಾಲಾ ವ್ಯವಸ್ಥೆಗೆ ಸಂಬಂಧಪಟ್ಟಂತೆ ಕಾನೂನು ಅಗತ್ಯಗಳಿಗೆ ಬದ್ಧವಾಗಿರಬೇಕು. ಅದರಲ್ಲಿಯೂ ಮುಖ್ಯವಾಗಿ ಶಿಕ್ಷಣ (ಸಾಮಾನ್ಯ ಅವಕಾಶಗಳು) ಕಾಯ್ದೆ 2006 (ಕ್ವೀನ್ಸ್-ಲ್ಯಾಂಡ್) ಮತ್ತು ರಾಜ್ಯ ಹಾಗೂ ಕಾಮನ್ವೆಲ್ತ್ ತಾರತಮ್ಯ ಕಾಯ್ದೆಗಳು. ಈ ಅಗತ್ಯಗಳ ಬಗೆಗೆ ಇನ್ನಷ್ಟು ಮಾಹಿತಿಗಳನ್ನು ತಿಳಿದುಕೊಳ್ಳಲು ಈ ಲಿಂಕ್ ಕ್ಲಿಕ್ ಮಾಡಿ: Inclusive education

**ಹೆಚ್ಚುವರಿ ಓದು**

ಬಾಲ್ಯಾವಸ್ಥೆಯ ಶಿಕ್ಷಣದ ಬಗೆಗೆ ಇರುವ ನೀತಿಗಳು ಮತ್ತು ಕಾನೂನು ಅಗತ್ಯಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಲೈಬ್ರೆರಿ ವೆಬ್-ತಾಣದ ಮೂಲಕ ಈ ಕೆಳಗಿನ ಲೇಖನಗಳನ್ನು ಓದಬಹುದು:

• Miller, M. & Petriwskyj, A. (2013). New directions in intercultural Early Education in Australia. International Journal of Early Childhood, 45, 251-266. Doi: 10.1007/s13158-013-0091-4
• Petriwskyj, A., Thorpe, K., & Tayler, C. (2014). Towards inclusion: provision for diversity in the transition to school. International Journal of Early Years Education, 22(4), 359-379. doi: 0.1080/09669760.2014.911078

## ಒಳಗೊಳ್ಳುವಿಕೆಯ ಅಡೆತಡೆಗಳು ಮತ್ತು ಮಿಥ್ಯೆಗಳು

ವೈವಿಧ್ಯತೆ ಮತ್ತು ಒಳಗೊಳ್ಳುವಿಕೆಯ ವಿಷಯದಲ್ಲಿ ಗಮನಾರ್ಹ ಬದಲಾವಣೆಗಳು ಉಂಟಾಗಿದ್ದರೂ ಕೂಡ ಯಶಸ್ವೀ ಒಳಗೊಳ್ಳುವ ಪ್ರಕ್ರಿಯೆಗೆ ಈಗಲೂ ಸಂಭವನೀಯ ಅಡೆತಡೆಗಳು ಇದ್ದೇ ಇವೆ. ಇಂತಹ ಅಡೆತಡೆಗಳು ಶಿಕ್ಷಕರು ಸಮನ್ವಯ ಪರಿಸರವನ್ನು ವಿನ್ಯಾಸ ಮತ್ತು ಸೃಷ್ಟಿಮಾಡಲು ಅವಕಾಶಗಳನ್ನು ತೆಗೆದುಕೊಳ್ಳಲು ಇರುವ ಸಿದ್ಧತೆಯನ್ನು ತಗ್ಗಿಸುತ್ತವೆ. ಈ ಅಡೆತಡೆಗಳು ವೈಯಕ್ತಿಕ, ಅಭಿವೃತ್ತಿಗಳು, ಮತ್ತು ಸಂಘಟನಾತ್ಮಕ ಮುಂತಾದ ವಿಸ್ತೃತ ಅಂಶಗಳಿಂದ ಹೊರಬೀಳಬಹುದು. ಒಂದು ವೈಯಕ್ತಿಕ ದೃಷ್ಟಿಕೋಣದಿಂದ, ಶಿಕ್ಷಕರು ಕೆಲಸದ ಒತ್ತಡ ಹೆಚ್ಚುತ್ತದೆ ಎಂಬ ನಂಬಿಕೆ, ಅಥವಾ ವೈವಿಧ್ಯತೆಯ ಇರುವ ಮಕ್ಕಳೊಂದಿಗೆ ಕೆಲಸ ಮಾಡಲು ತಮ್ಮ ಕೌಶಲ್ಯಗಳ ಬಗ್ಗೆ ವಿಶ್ವಾಸದ ಕೊರತೆಯಿಂದಾಗಿ ಒಳಗೊಳ್ಳುವಿಕೆಯ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳಲು ಸಿದ್ಧರಿಲ್ಲದಿರಬಹುದು. ವೈಯಕ್ತಿಕ ಪೂರ್ವಗ್ರಹಗಳು ಮತ್ತು ಅಭಿವೃತ್ತಿಗಳು ಶಿಕ್ಷಕರು ತಮ್ಮ ಕಾರ್ಯಕ್ರಮಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಅಥವಾ ತಮ್ಮ ಕಾರ್ಯಕ್ರಮಗಳ ಮಿತಿಯಲ್ಲಿಯೇ ಮಕ್ಕಳನ್ನು ಸೂಕ್ತವಾಗಿ ಬೆಂಬಲಿಸಲು ಅವರಿಗಿರುವ ಒಪ್ಪಿಗೆಯನ್ನು ಪ್ರಭಾವಿಸುತ್ತವೆ.

.

ಒಳಗೊಳ್ಳುವ ಪ್ರಕ್ರಿಯೆಗೆ ನಾಯಕತ್ವದ ಕೊರತೆ, ಸಿಬ್ಬಂದಿಗೆ ಸರಿಯಾದ ವೃತ್ತಿಪರ ಬೆಳವಣಿಗೆ ಇಲ್ಲದೇ ಇರುವುದು ಅಥವಾ ಸಂಪನ್ಮೂಲಗಳಿಗೆ ಬೇಕಾದ ಹಣಕಾಸಿನ ಕೊರತೆ ಮುಂತಾದ ಸಾಂಸ್ಥಿಕ ವ್ಯವಸ್ಥೆಗಳು ಮತ್ತು ರಚನೆಗಳು ಶಿಕ್ಷಕರಿಗೆ ತೊಡಕಾಗಿ ಪರಿಣಮಿಸಬಹುದು. ಆರಂಭಿಕ ಬ್ಯಾಲ್ಯಾವಸ್ಥೆ ಅತ್ಯಂತ ವಿಶಿಷ್ಟವಾದ ಅವಧಿಯಾಗಿದ್ದು ಇದು ಭವಿಷ್ಯದ ಎಲ್ಲ ವಿಕಾಸ ಮತ್ತು ಕಲಿಕೆಗೆ ನೀಲನಕಾಶೆ ಒದಗಿಸುತ್ತದೆ. ಅಡಚಣೆಗಳು ಇದ್ದಾಗ ಮಕ್ಕಳ ಕಲಿಕೆ ಮತ್ತು ವಿಕಾಸ ಗಣನೀಯವಾಗಿ ಕುಂಠಿತವಾಗುತ್ತದೆ.

ಒಳಗೊಳ್ಳುವಿಕೆಗೆ ಸಂಬಂಧಿಸಿದ ತಪ್ಪು ಕಲ್ಪನೆಗಳು ಕೂಡಾ ಎಲ್ಲ ಮಕ್ಕಳಿಗೂ ಸಮನ್ವಯ ವಾತಾವರಣವನ್ನು ಸೃಷ್ಟಿಸುವುದನ್ನು ತಪ್ಪಿಸಬಹುದು. ಹಾಗಾಗಿ ಗಟ್ಟಿಯಾದ ಅಭ್ಯಾಸಕ್ರಮಗಳ ಮೂಲಕ, ಶಿಕ್ಷಕರ ಬದ್ಧತೆ ಮತ್ತು ಟೀಮ್ ವರ್ಕ್ ಮೂಲಕ ಒಳಗೊಳ್ಳುವ ಅಭ್ಯಾಸಗಳನ್ನು ಜಾರಿಗೆ ತಂದು ತಪ್ಪು ಕಲ್ಪನೆಗಳನ್ನು ಹೊಡೆದೋಡಿಸುವುದು ಯಶಸ್ವೀ ಒಳಗೊಳ್ಳುವಿಕೆಗೆ ಆರಂಭಿಕ ಘಟ್ಟವಾಗಿದೆ. ಈ ಕೆಳಗಿನ ಕೆಲವು ಶೀರ್ಷಿಕೆಗಳ ಮೂಲಕ ಲಿವಿಂಗ್-ಸ್ಟನ್ (2018) ಈ ತಪ್ಪು ಕಲ್ಪನೆಗಳನ್ನು ಸಂಕ್ಷಿಪ್ತಗೊಳಿಸುವ ಪ್ರಯತ್ನ ಮಾಡಿದ್ದಾರೆ; ಒಳಗೊಳ್ಳೊವಿಕೆ ಅಸಾಮರ್ಥ್ಯದ ಬಗ್ಗೆ ಅಲ್ಲ ಎಂಬ ಅಭಿಪ್ರಾಯ, ತರಗತಿಯಲ್ಲಿ ಅಂಗವಿಕಲ ಮಗುವನ್ನು ಸೇರಿಸಿಕೊಳ್ಳುವುದರಿಂದ ಆಗುವ ಪರಿಣಾಮಗಳ ಬಗ್ಗೆ ಗ್ರಹಿಕೆ ಮತ್ತು ಒಳಗೊಳ್ಳುವಿಕೆ ಮತ್ತು ಬಾಲ್ಯದಲ್ಲಿಯೇ ಮಧ್ಯಪ್ರವೇಶದ ಬಗೆಗೆ ಇರುವ ವ್ಯತ್ಯಾಸಗಳು. ಈ ಮಿಥ್ಯೆಗಳ ಬಗೆಗೆ ಇರುವ ಚರ್ಚೆ ಇಲ್ಲಿದೆ:

**ಒಳಗೊಳ್ಳುವಿಕೆ ಎಂದರೆ ಕೇವಲ ಅಸಾಮರ್ಥ್ಯದ ಬಗ್ಗೆ ಅಲ್ಲ**

"ಒಳಗೊಳ್ಳುವಿಕೆ ಎಲ್ಲ ಕಲಿಕಾರ್ಥಿಗಳಿಗೆ ಸಂಪರ್ಕ, ತೊಡಗಿಕೊಳ್ಳುವಿಕೆ ಮತ್ತು ಯಶಸ್ಸಿಗೆ ದಾರಿಮಾಡಿಕೊಡುತ್ತದೆ" (ಪು.65) ಎನ್ನುತ್ತಾರೆ ಆಶ್ಮನ್ ಮತ್ತು ಎಲ್ಕಿನ್ಸ್ (2005). ಆಸ್ಟ್ರೇಲಿಯಾದ ಅಬೊರಿಜಿನಲ್ ಮತ್ತು ಟೋರೆಸ್ ಸ್ಟ್ರೇಟ್ ಐಲ್ಯಾಂಡರ್ ಜನರೂ ಸೇರಿದಂತೆ ಸಾಂಸ್ಕೃತಿಕವಾಗಿ ಮತ್ತು ಭಾಷೆಯ ದೃಷ್ಟಿಯಿಂದ ವಿಭಿನ್ನ ಹಿನ್ನೆಲೆಯನ್ನು ಹೊಂದಿರುವ ಹಾಗೂ ಅಂಗವಿಕಲತೆಯನ್ನು ಹೊಂದಿರುವ ಹಾಗೂ ವಿಭಿನ್ನ ಕೌಟುಂಬಿಕ ಸಂರಚನೆಯ ಹಿನ್ನೆಲೆಯನ್ನು ಹೊಂದಿರುವ ಜನರ ವೈವಿಧ್ಯತೆಯ ಮೌಲ್ಯವನ್ನು ಎನ್.ಕ್ಯೂ.ಎಫ್. ಉತ್ತೇಜಿಸುತ್ತದೆ. ಇಸಿಇಗಾಗಿರುವ ಅನುಮೋದಿತ ಕಲಿಕಾ ಚೌಕಟ್ಟಿನಲ್ಲಿ ಒಳಗೊಳ್ಳುವಿಕೆಯ ವ್ಯಾಖ್ಯಾನವೇನೆಂದರೆ ಅದು ಕೇವಲ ಅಸಾಮರ್ಥ್ಯ ಮಕ್ಕಳನ್ನು ಒಳಗೊಳ್ಳುವುದಕ್ಕಿಂತ ವಿಶಾಲ ಅರ್ಥವ್ಯಾಪ್ತಿ ಹೊಂದಿರುವಂತಹುದು. ಒಳಗೊಳ್ಳುವುದು ಎಂದರೆ ವೈವಿಧ್ಯತೆಯನ್ನು ಒಪ್ಪಿಕೊಳ್ಳುವುದು, ಪ್ರತಿ ಮಗುವನ್ನೂ ಸಮಗ್ರವಾಗಿ ಒಳಗೂಡಿಸಿ ಭಾಗವಹಿಸಲು ಮತ್ತು ಅನುಕೂಲಪಡೆಯಲು ಎಲ್ಲ ಅವಕಾಶಗಳನ್ನು ಒದಗಿಸುವುದು.

ಮೇಲೆ ತಿಳಿಸಿದಂತೆ ಪ್ರಚಲಿತ ನೀತಿಗಳು ಮತ್ತು ಕಾನೂನು ಅಗತ್ಯಗಳ ಕುರಿತು ಚರ್ಚೆ ಮಾಡುವಾಗ ಒಳಗೊಳ್ಳುವಿಕೆ ಎನ್ನುವುದು ಮೂಲಭೂತ ಮಾನವ ಹಕ್ಕು. ಮಕ್ಕಳ ಹಕ್ಕುಗಳ ಬಗೆಗಿನ ವಿಶ್ವಸಂಸ್ಥೆ ಒಪ್ಪಂದದ ಪ್ರಕಾರ, ಎಲ್ಲಾ ಮಕ್ಕಳಿಗೂ ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ವಿಕಸಿಸಿಕೊಳ್ಳಲು, ಭವಿಷ್ಯದ ಬದುಕಿಗೆ ಮಕ್ಕಳನ್ನು ಸಿದ್ಧಪಡಿಸುವ, ತಮ್ಮ ಕುಟುಂಬ, ಸಂಸ್ಕೃತಿ ಮತ್ತು ಇತರ ಅಸ್ತಿತ್ವಗಳು ಹಾಗೂ ಭಾಷೆಗಳನ್ನು ಗೌರವಿಸಲು ಸಿದ್ಧಪಡಿಸುವ (29ನೇ ವಿಧಿ) ಶಿಕ್ಷಣವನ್ನು ಹೊಂದುವುದು ಅವರ ಹಕ್ಕು(28ನೇ ವಿಧಿ). ಇದು ರಾಷ್ಟ್ರೀಯ ನಿಬಂಧನೆಗಳ ಸಾಲಿನಲ್ಲಿ 155ನೇ ನಿಬಂಧನೆಯಾಗಿ ಕಾಣಿಸಿಕೊಂಡಿದೆ. ಇದರಲ್ಲಿ, ಮಕ್ಕಳಿಗೆ ಶಿಕ್ಷಣ ಮತ್ತು ಅದಕ್ಕೆ ಸಂಬಂಧಿಸಿದಂತೆ ಅನುಮೋದಿತ ಸೇವೆಯನ್ನು ಒದಗಿಸುವವರು ಪ್ರತಿಯೊಂದು ಮಗುವಿನ ಗೌರವ ಹಾಗೂ ಹಕ್ಕುಗಳನ್ನು ಎಲ್ಲ ಕಾಲಕ್ಕೂ ಕಾಯ್ದುಕೊಳ್ಳುವಂತೆ ನ್ಯಾಯಸಮ್ಮತವಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಲಾಗಿದೆ.

**ಹೆಚ್ಚುವರಿ ಅಗತ್ಯಗಳಿರುವ ಮಗುವಿನ ಸೇರ್ಪಡೆ**

ವೈವಿಧ್ಯ ಹಿನ್ನೆಲೆಯ ಮಕ್ಕಳನ್ನು ಸೇರಿಸುವುದು ಇತರ ಗುಂಪುಗಳಿಗೆ ಅಥವಾ ತರಗತಿಯ ಸದಸ್ಯರಿಗೆ ಅಹಿತಕರವಾಗುತ್ತದೆ ಎಂಬ ಅಭಿಪ್ರಾಯವಿದೆ. ಈಗ ಸಮನ್ವಯ ತರಗತಿಗಳಿಂದ ಸಹಪಾಠಿಗಳಿಗೆ ಹಾನಿ ಅಥವಾ ಅನನುಕೂಲವಾಗುವುದಿಲ್ಲ ಎಂದು ಸಾಕಷ್ಟು ಸಾಕ್ಷ್ಯಗಳು ಲಭ್ಯವಿವೆ, ಬದಲಾಗಿ, ವೈವಿಧ್ಯತೆಯನ್ನು ಹೊಂದಿದ ಸಹಪಾಠಿಗಳೊಡನೆ ಅವರು ಬೆಳೆಸಿಕೊಳ್ಳುವ ಮತ್ತು ಉಳಿಸಿಕೊಳ್ಳುವ ಸಂಬಂಧಗಳ ಪರಿಣಾಮವಾಗಿ ಹೆಚ್ಚು ಬೆಳವಣಿಗೆ ಮತ್ತು ವಿಕಾಸ ಹೊಂದುತ್ತಾರೆ. (ಓಡಮ್ ಮತ್ತು ಇತರರು 2004). ಅದೇ ರೀತಿ ಇಂತಹ ಒಳಗೊಳ್ಳುವ ವ್ಯವಸ್ಥೆಯಲ್ಲಿ ಮಕ್ಕಳು ತಮ್ಮ ಸಹಪಾಠಿಗಳಿಂದ ಹೆಚ್ಚು ಕಲಿಯುತ್ತಾರೆ. ಅಸಾಮರ್ಥ್ಯತೆ ಹೊಂದಿರುವ ಮಕ್ಕಳನ್ನು

ಎಲ್ಲರೊಂದಿಗೆ ಒಳಗೊಳ್ಳುವಂತೆ ಮಾಡುವುದರಿಂದ ಸಹಪಾಠಿಗಳು ಹೆಚ್ಚು ತಿಳುವಳಿಕೆಗಳನ್ನು ಪಡೆದುಕೊಳ್ಳಲು ಹಾಗೂ ತಮ್ಮ ವಿಭಿನ್ನ ಸಹವರ್ತಿಗಳ ಬಗ್ಗೆ ಧನಾತ್ಮಕ ಅಭಿವೃತ್ತಿ ಬೆಳೆಸಿಕೊಳ್ಳಲು ಅವಕಾಶವಾಗುತ್ತದೆ. (ಓಡಮ್ ಮತ್ತು ಬೈಲೀ, 2001).

ಎಲ್ಲರನ್ನೂ ಒಳಗೊಳ್ಳುವ ವಾತಾವರಣದ ವಿಶೇಷತೆ ಏನೆಂದರೆ ಪುನರಾವರ್ತಿತ ಮತ್ತು ಪೂರ್ವ ಸಿದ್ಧತೆ ಇಲ್ಲದ ಅಂತರಕ್ರಿಯೆಗಳು ಎಲ್ಲ ಮಕ್ಕಳ ಸಾಮಾಜಿಕ, ಸಂವೇಗಾತ್ಮಕ ಮತ್ತು ವರ್ತನಾತ್ಮಕ ವಿಕಾಸವನ್ನು ಬೆಂಬಲಿಸುತ್ತದೆ (ಓಡಮ್ ಮತ್ತು ಇತರರು, 2004). ಅಂಗವಿಕಲತೆ ಹೊಂದಿರುವ ಅಥವಾ ವಿಭಿನ್ನ ಸಾಮರ್ಥ್ಯಗಳ ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳೊಂದಿಗೆ ಸಾಮಾಜಿಕವಾದ ಸಮಾಲೋಚನೆಯಲ್ಲಿ ತೊಡಗಿಕೊಳ್ಳುವ ಪ್ರಯತ್ನ ಮಾಡಿದಾಗ ಸಾಮಾನ್ಯವಾಗಿ ಒಳಗೊಳ್ಳುವ ಪರಿಸರದಿಂದ ಅನುಭವವನ್ನು ಪಡೆದುಕೊಂಡಿರುವ ವಿದ್ಯಾರ್ಥಿಗಳು ಇಂತಹ ಉಪಕ್ರಮಗಳಿಗೆ ಪೂರಕವಾಗಿ ಪ್ರತಿಸ್ಪಂದಿಸುತ್ತಾರೆ. ಇತರ ಮಕ್ಕಳನ್ನು ಅರ್ಥಮಾಡಿಕೊಳ್ಳುವ ಮತ್ತು ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಸಂಬಂಧಗಳನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುತ್ತಾರೆ. (ಓಡಮ್ ಮತ್ತು ಇತರರು, 2004). ಇವೆಲ್ಲದರ ಜೊತೆಗೆ ಎಲ್ಲರನ್ನು ಒಳಗೊಳ್ಳುವ ವಾತಾವರಣದ ಅನುಭವಗಳನ್ನು ಪಡೆದ ಮಕ್ಕಳು ನೀತಿಸಮ್ಮತಿ ಮತ್ತು ನಿಷ್ಪಕ್ಷಪಾತದ ಮೇಲೆ ಬಲವಾದ ಗಮನವಿಟ್ಟು ಆಟವಾಡುತ್ತಾರೆ ಮತ್ತು ಆಟದಲ್ಲಿ ತಮ್ಮ ವಿಭಿನ್ನ ಸಹಪಾಠಿಗಳನ್ನು ಸೇರಿಸಿಕೊಳ್ಳುವ ಗುರಿಯುಳ್ಳ ವಿಧಾನಗಳನ್ನು ಹೆಚ್ಚು ಬಳಸುತ್ತಾರೆ (ಡೈಮಂಡ್ & ಹಾಂಗ್ 2010).

ಒಳಗೊಳ್ಳುವ ಕ್ರಿಯೆಗಳಿಗೆ ಚಿಕ್ಕವಯಸ್ಸಿನಲ್ಲಿ ಮಕ್ಕಳು ಬಗ್ಗೆ ಹೆಚ್ಚು ಸೂಕ್ಷ್ಮತೆ ಎಂದು ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ. ಮಕ್ಕಳು ದೊಡ್ಡವರಾಗುತ್ತ ಹೋದ ಹಾಗೆ ಶೈಕ್ಷಣಿಕ ವ್ಯವಸ್ಥೆಯಲ್ಲಿ ಅಸಮರ್ಥತೆ ಇರುವ ಮಕ್ಕಳನ್ನು ಸ್ವೀಕರಿಸುವ ಸಾಧ್ಯತೆಗಳು ಕಡಿಮೆಯಾಗುತ್ತ ಹೋಗುತ್ತವೆ ಎಂಬುದನ್ನು ಪುರಾವೆಗಳೇ ಸೂಚಿಸುತ್ತವೆ (ಸಿಪರ್-ಸ್ಟೀನ್, ಪಾರ್ಕರ್, ಬಾರ್ಡನ್ ಮತ್ತು ವಿಡಾಮನ್, 2007). ಒಳಗೊಳ್ಳುವಿಕೆ ಎಲ್ಲಾ ಮಕ್ಕಳಿಗೂ ಲಾಭದಾಯಕವಾದ ಕಾರಣ ಆರಂಭಿಕ ಬಾಲ್ಯ ಸನ್ನಿವೇಶಗಳಲ್ಲಿ ಇದನ್ನು ಬಹುಮುಖ್ಯ ಎಂದೇ ಪರಿಗಣಿಸಬೇಕು. (ಗುಪ್ತಾ, ಹೆನ್ನಿಂಗರ್ ಮತ್ತು ವಿನ್ಟ, 2014).

**ಒಳಗೊಳ್ಳುವಿಕೆ ಮತ್ತು ಆರಂಭಿಕ ಮಧ್ಯಪ್ರವೇಶಿಕೆ ಒಂದೇ ಅಲ್ಲ**

ಒಳಗೊಳ್ಳುವಿಕೆ ಮತ್ತು ವೈವಿಧ್ಯತೆ ಇರುವ ಮಕ್ಕಳಿಗೆ ಮಧ್ಯಪ್ರವೇಶ ಇವೆರಡೂ ಸಹಸಂಬಂಧ ಹೊಂದಿರುವ ಸಂಕಲ್ಪನೆಗಳಾದರೂ ಅವುಗಳನ್ನು ಬೇರೆ ಎಂದೇ ನೋಡಲಾಗುತ್ತದೆ ಮತ್ತು ಅವುಗಳ ಫಲಿತಾಂಶವೂ ಬೇರೆಯಾಗಿರುತ್ತದೆ. ಮೇಲೆ ಪ್ರಸ್ತಾಪ ಮಾಡಿರುವಂತೆ ಇವೈಎಲ್ಎಫ್-ನಲ್ಲಿನ ಒಳಗೊಳ್ಳುವಿಕೆ ಎಂದರೆ ಎಲ್ಲ ಮಕ್ಕಳಿಗೆ ಸಮಗ್ರವಾಗಿ ಅನ್ವಯವಾಗುವಂತಹುದು. ಆರಂಭಿಕ ಮಧ್ಯಪ್ರವೇಶವು ಹೆಚ್ಚುವರಿ ಬೆಂಬಲದ ಅಗತ್ಯವಿರುವ ಮಕ್ಕಳಿಗೆ ಸಂಬಂಧಿಸಿದ್ದು ಮತ್ತು ಇದರಲ್ಲಿ ತಜ್ಞರ ಬೆಂಬಲದ ಅಗತ್ಯವಿರುತ್ತದೆ. ಮಕ್ಕಳು ದಿನನಿತ್ಯದ ಚಟುವಟಿಕೆಗಳಲ್ಲಿ ಭಾಗಿಯಾಗಲು ಮತ್ತು ಕುಟುಂಬ ಹಾಗೂ ಸಮುದಾಯದ ಜೀವನದಲ್ಲಿ ಭಾಗವಹಿಸಲು ಅಗತ್ಯವಿರುವ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಬೆಂಬಲ ನೀಡುವುದು ಇದರ ಉದ್ದೇಶ. ಇಂತಹ ಪ್ರಕ್ರಿಯೆಯು ಒಳಗೊಳ್ಳುವ ವಾತಾವರಣದಲ್ಲಿ ನಡೆಸಲಾಗುತ್ತದೆ. ಇಲ್ಲಿ ಮಗುವಿನ ಜೀವನದಲ್ಲಿ ಬಹುಮುಖ್ಯವಾಗಿರುವ ಪ್ರೌಢರು ಮಕ್ಕಳು ತಮ್ಮ ದಿನನಿತ್ಯದ ಬದುಕಿನ ಚಟುವಟಿಕೆಗಳಲ್ಲಿ ಅರ್ಥಪೂರ್ಣವಾಗಿ ಭಾಗಿಯಾಗಲು ಸಾಧ್ಯವಾಗುವಂತಹ ಅನುಭವ ಹಾಗೂ ಅವಕಾಶಗಳನ್ನು ಒದಗಿಸುತ್ತಾರೆ..

**ಪರ್ಯಾಲೋಚನೆ**

- ಈ ಮೂರು ತಪ್ಪು ಕಲ್ಪನೆಗಳ ಮೇಲೆ ಹೆಚ್ಚಿನ ಗಮನವನ್ನು ನೀಡುವುದು

- ಚರ್ಚೆಗೆ ನೀನು ಏನನ್ನು ಸೇರಿಸಬಹುದು?
- ನಿಮ್ಮ ಆಲೋಚನೆಗಳಲ್ಲಿ ಏನಾದರೂ ಬದಲಾವಣೆಗಳನ್ನು ಅನುಭವಿಸಿದ್ದೀರಾ?


## ಸಮನ್ವಯತೆಯ ಅಭ್ಯಾಸಕ್ರಮ

## ಮಗುವಿನ ಪ್ರತಿರೂಪ (ಬಿಂಬ)

ಯಶಸ್ವೀ ಒಳಗೊಳ್ಳುವ ಅಭ್ಯಾಸಕ್ರಮದ ಆರಂಭಿಕ ಹಂತವೆಂದರೆ ಮಗುವಿನ ಪ್ರತಿರೂಪದ ಬಗ್ಗೆ ಪರಾಮರ್ಶಿಸುವುದು. ಲಾರೀಸ್ ಮಲಗುಝಿ (೧೯೯೪) ಮಗುವಿನ ಬಗ್ಗೆ ಶಿಕ್ಷಕರು ಹೊಂದಿರುವ ಬಿಂಬಗಳು ಅವರು ಹೇಗೆ ಮಕ್ಕಳೊಂದಿಗೆ ಮಾತನಾಡುತ್ತಾರೆ, ಅವರ ಮಾತನ್ನು ಆಲಿಸುತ್ತಾರೆ, ಅವರನ್ನು ಹೇಗೆ ಗಮನಿಸುತ್ತಾರೆ ಮತ್ತು ಅವರೊಂದಿಗೆ ಹೇಗೆ ಸಂಬಂಧವನ್ನು ಹೊಂದುತ್ತಾರೆ ಎಂಬುದನ್ನು ನಿರ್ದೇಶಿಸುತ್ತದೆ ಎಂದು ಸೂಚಿಸುತ್ತಾರೆ. ಶಿಕ್ಷಕರ ಮನಸ್ಸಿನಲ್ಲಿ ಮಗುವಿನ ಬಗ್ಗೆ ಇರುವ ಚಿತ್ರ ಅವರು ಮಗುವನ್ನು ಹೇಗೆ ನೋಡುತ್ತಾರೆ ಮತ್ತು ಮಗುವಿನಿಂದ ಏನನ್ನು ನಿರೀಕ್ಷಿಸುತ್ತಾರೆ ಎಂಬುದರ ಮೇಲೂ ಪರಿಣಾಮ ಬೀರುತ್ತದೆ. ಮಕ್ಕಳ ಪ್ರತಿರೂಪದ ಬಗ್ಗೆ ಆಲೋಚಿಸಿದಾಗ, ಮಕ್ಕಳು ನಾವು ಅವರನ್ನು ವೀಕ್ಷಿಸಿ ಮತ್ತು ಹಣೆಪಟ್ಟಿ ಹಚ್ಚಿದಂತಲ್ಲ ಬದಲಾಗಿ ಹೇಗಿದ್ದಾರೋ ಹಾಗೆಯೇ ಎನ್ನುವದಕ್ಕೆ ನಮ್ಮ ಗಮನ ಪಲ್ಲಟವಾಗುತ್ತದೆ.

ಅಂತರ್ವೇಶನದ ಅಭ್ಯಾಸದ ಸಮರ್ಥಕರು ಮುಂದಿಡುವ ಮಗುವಿನ ಪ್ರತಿರೂಪ, ಮಗು ಪ್ರಪಂಚವನ್ನು ಅನುಭವಿಸಲು, ಮತ್ತು ಜಗತ್ತಿನೊಡನೆ ಸಂಬಂಧಗಳನ್ನು ಬೆಳೆಸಿಕೊಳ್ಳಲು ಎಷ್ಟು ಮಗ್ನವಾಗಿರುತ್ತದೆ ಎಂದರೆ ಅವನು ಅಥವಾ ಅವಳು ಸಾಮರ್ಥ್ಯ, ಕಲಿಕಾ ತಂತ್ರಗಳು ಮತ್ತು ಸಂಬಂಧಗಳನ್ನು ಸಂಘಟಿಸುವ ಸಂಕೀರ್ಣ ವ್ಯವಸ್ಥೆ ಬೆಳೆಸಿಕೊಳ್ಳುತ್ತಾರೆ  ಎಂಬಂತೆ ತೋರಿಸುತ್ತದೆ . (ರಿನಾಲ್ಡಿ, 2013).  ಮಕ್ಕಳು "ತಮ್ಮದೇ ಬುದ್ಧಿಶಕ್ತಿಯನ್ನು ಹೊಂದಿರುವವರು ಮತ್ತು ರಚನೆಕಾರರು", ತಮ್ಮ ಕಲಿಕೆಯನ್ನು ನಾನಾ ವಿಧಗಳಲ್ಲಿ ವ್ಯಕ್ತಪಡಿಸುವವರು; ರಿಗೋ ಬೋಧನಕಾರರ ಪ್ರಕಾರ ನೂರಾರು ಭಾಷೆಗಳನ್ನು ವ್ಯಕ್ತಪಡಿಸುವವರು (ರಿನಾಲ್ಡಿಮ 2013). ಆಸ್ಟ್ರೇಲಿಯಾದ ಬಾಲ್ಯದ ಕಲಿಕಾ ಚೌಕಟ್ಟಿನ (2010) ನಂಬಿಕೆ ಪ್ರಕಾರ ಮಕ್ಕಳು ತಮ್ಮದೇ ಕಲಿಕೆಯನ್ನು ರೂಪಿಸಿಕೊಳ್ಳುವಲ್ಲಿ ಸಮರ್ಥರು.

.




*ಚಿತ್ರ 4.2: ಮಗುವಿನ ಕಾಮಿಕ್ ಚಿತ್ರ. (2019). ಆಸ್ಟ್ರೇಲಿಯಾ, USQ.*n

## ಪರ್ಯಾಲೋಚನೆ

• ಮಗುವಿನ ಬಗ್ಗೆ ನಿಮ್ಮ ಪ್ರತಿರೂಪ ಏನು?

• ಮಗುವಿನ ಸಾಮರ್ಥ್ಯಗಳು ಮತ್ತು ಸಂಕೀರ್ಣತೆಗಳನ್ನು ನೀವು ಕಾಣುವಿರಾ?

• ಈ ಮಗುವು ತನ್ನ ಯೋಚನೆ, ಸಿದ್ಧಾಂತಗಳು ಮತ್ತು ಅಚ್ಚರಿಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತದೆಯೇ ಅಥವಾ ಪ್ರೌಢ-ಮಗು ಅಂತರಕ್ರಿಯೆಗಳಲ್ಲಿ ಅವನ್ನು ತಡೆಹಿಡಿಯತ್ತಾರೆಯೇ?

## ಮಕ್ಕಳನ್ನು ಅರಿತುಕೊಳ್ಳುವುದು

ಮಕ್ಕಳಿಗೆ ಸೂಕ್ತವಾದ ಬೆಂಬಲ ಒದಗಿಸಲು, ಮಕ್ಕಳನ್ನು ವೈಯುಕ್ತಿಕವಾಗಿ ಪ್ರತಿಯೊಂದು ಮಗುವಿನ ಬಗ್ಗೆಯೂ ತಿಳಿದುಕೊಳ್ಳುವುದು ಅತ್ಯಗತ್ಯ. ಇದನ್ನು ಕುಟುಂಬದವರ ಜೊತೆ ಮತ್ತು ಮಗುವಿನ ಜೊತೆ ಚರ್ಚೆ ಮಾಡುವ ಮೂಲಕ ಹಾಗೂ ಮಗುವಿನ ಚಟುವಟಿಕೆಗಳನ್ನು ಮತ್ತು ದಾಖಲೆಗಳನ್ನು ಅವಲೋಕಿಸುವ ಮೂಲಕ ಯಶಸ್ವಿಯಾಗಿ ಸಾಧಿಸಬಹುದು. ಕುಟುಂಬದ ಜೊತೆ ಚರ್ಚೆ ಮಾಡುವುದರಿಂದ ಮಗುವಿನ ಬಗ್ಗೆ ಮಹತ್ವದ ಮಾಹಿತಿಗಳನ್ನು ಶಿಕ್ಷಕರು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಪಾಲಕರ ಜೊತೆಗಿನ ಸಂವಾದದಲ್ಲಿ ಪ್ರಶ್ನೆಗಳನ್ನು ಸಂವೇದಾನಶಿಲತೆಯಿಂದ ಕೇಳುವುದು ಮತ್ತು ಅರ್ಥಮಾಡಿಕೊಳ್ಳುವುದು ಕುಟುಂಬಕ್ಕೆ ಹಿತವುಂಟುಮಾಡಿ ನಂಬಿಕೆ ಮತ್ತು ಗೌರವಗಳನ್ನಾಧರಿಸಿದ ಸಂವಹನ ಮತ್ತು ಮುಕ್ತ ಚರ್ಚೆಯನ್ನು ಪ್ರೋತ್ಸಾಹಿಸುತ್ತದೆ.

*ಚಿತ್ರ 4:3: ಗಿನಿಯಾ ಹಂದಿ ಮರಿಯ ಜೊತೆ ಮಗುವಿನ ಚಿತ್ರ (2018),*



*ಆಸ್ಟ್ರೇಲಿಯಾ, USQ ಸಂಗ್ರಹ ಚಿತ್ರ.*



*ಚಿತ್ರ 4.4 ತಾಯಿ ಮತ್ತು ಮಗುವಿನ ಆತ್ಮೀಯ ಕ್ಷಣ*

ಮಕ್ಕಳ ಸಾಮರ್ಥ್ಯಗಳು, ಅಗತ್ಯಗಳು ಮತ್ತು ಆಸಕ್ತಿಗಳ ಬಗೆಗೆ ಮಗುವಿನೊಂದಿಗೇ ಚರ್ಚೆಗಳನ್ನು ಮಾಡುವುದು ಅವರನ್ನು ಸಬಲೀಕರಿಸಿ ಅವರ ಕತೃತ್ವಶಕ್ತಿಯ ಭಾವನೆಯನ್ನು ಹೆಚ್ಚಿಸುತ್ತದೆ. ಸಂವಾದಗಳು ಮಕ್ಕಳಿಗೆ ತಮ್ಮ ಆಸಕ್ತಿಗಳು ಮತ್ತು ಅಗತ್ಯಗಳನ್ನು ಮಾತಿನ ಮೂಲಕ ವ್ಯಕ್ತಪಡಿಸಲು ಅವಕಾಶ ಒದಗಿಸುತ್ತದೆ.. ಮಕ್ಕಳಲ್ಲಿರುವ ಆಸಕ್ತಿ, ಅವರ ಸಾಮರ್ಥ್ಯಗಳು, ಕಲಿಕೆ, ಬೆಳವಣಿಗೆ ಮತ್ತು ಸುಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಆರಂಭಿಕ ಬಾಲ್ಯದ ಶಿಕ್ಷಕರಿಗೆ ಅವಲೋಕನ ಉತ್ತಮ ವಿಧಾನ (ಕಾಲ್ವಿಲೆ, 2018). ಪ್ರತಿಯೊಂದು ಮಗುವನ್ನು ಅವಲೋಕಿಸುವಾಗ ಆ ಮಗುವಿನ ಸಾಮರ್ಥ್ಯಗಳ ಬಗ್ಗೆ ಗಮನ ಹರಿಸುವುದು ಮುಖ್ಯ. ಮಕ್ಕಳ ಸಂಭಾವ್ಯ ವೈವಿಧ್ಯತೆಯ ಕುರಿತು ಪಠ್ಯ ಪುಸ್ತಕದ ಆಚೆಗೆ ನೋಡಿದಾಗ ಮತ್ತು ಅವರ ಸಾಮರ್ಥ್ಯಗಳ ಬಗ್ಗೆ ಹಾಗೂ ಅವರು ನಿಜಕ್ಕೂ ಏನು ಮಾಡಬಲ್ಲರು ಎಂಬುದನ್ನು ಗಮನಿಸುವುದು ಅತ್ಯಂತ ಪ್ರಯೋಜನಕಾರಿ. ಯಾವುದೇ ರೀತಿಯ ಹಣೆಪಟ್ಟಿ ಹಚ್ಚದೆ ಅಥವಾ ರೋಗನಿದಾನ ಮಾಡದೆ ಮಕ್ಕಳನ್ನು ವೃತ್ತಿಪರವಾಗಿ ಮತ್ತು ನಿರಂತರವಾಗಿ ಅವಲೋಕನ ನಡೆಸಿ ದಾಖಲಿಸುವುದು ಕೂಡ ಉಪಯುಕ್ತವಾದ ಕ್ರಮ. ಒಬ್ಬ ಮಗುವಿಗೆ ಸಂಬಂಧಿಸಿದ ಮತ್ತು ಮಕ್ಕಳ ಗುಂಪುಗಳಿಗೆ ಸಂಬಂಧಿಸಿದ ಕಾರ್ಯಕ್ರಮ ಮತ್ತು ಯೋಜನೆ ರೂಪಿಸುವ ಬಗ್ಗೆ ನಿರ್ಧಾರ ಕೈಗೊಳ್ಳುವಾಗ ಇಂತಹ ಮಾಹಿತಿಗಳನ್ನು ಅನ್ವಿಸುವುದು ಹಾಗೂ ಈ ಅವಲೋಕನಗಳನ್ನು ವ್ಯಾಖ್ಯಾನಿಸುವುದು ಕೂಡ ಒಳಗೊಳ್ಳುವ ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿಯೂ ಪರಿಣಾಮಕಾರಿ.

ಮಗುವಿನ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಆರಂಭಿಕ ಬಾಲ್ಯ ಶಿಕ್ಷಕರ ಪಾತ್ರ ದೊಡ್ಡದು. ಒಂದು ನಿರ್ದಿಷ್ಟವಾದ ಅನುಕ್ರಮದಲ್ಲಿ ಮಕ್ಕಳ ಕಲಿಕಾ ಕೌಶಲಗಳನ್ನು ಅರ್ಥಮಾಡಿಕೊಳ್ಳುವುದರಿಂದ ಶಿಕ್ಷಕರು ಅವರ ಕಲಿಕಾ

ಕೌಶಲದ ಅಭಿವೃದ್ಧಿಯ ಬಗೆಗೆ ವಾಸ್ತವಕ್ಕೆ ಹತ್ತಿರವಾದ ನಿರೀಕ್ಷೆಗಳನ್ನು ಇಟ್ಟುಕೊಳ್ಳಲು ಸಾಧ್ಯವಾಗುತ್ತದೆ. ಉದಾಹರಣೆಗೆ ಒಂದು ಮಗು ನಡೆಯುವ ಅಭ್ಯಾಸವನ್ನು ಆರಂಭಿಸುವ ಮುನ್ನ ನಿಂತುಕೊಳ್ಳಲು ಅಭ್ಯಾಸ ಮಾಡಬೇಕಾಗುತ್ತದೆ. ವಿಶೇಷ ಅಗತ್ಯಗಳನ್ನು ಹೊಂದಿರುವ ಮಗು ಒಂದು ಕೌಶಲ್ಯವನ್ನು ಕರಗತಮಾಡಿಕೊಳ್ಳುವ ಮುನ್ನ ಕಲಿಯಲು ಆ ಕೌಶಲ್ಯವನ್ನು ಸಣ್ಣ-ಸಣ್ಣ ಭಾಗಗಳನ್ನಾಗಿ ವಿಭಾಗಿಸಬೇಕಾದ ಅಗತ್ಯವಿರುತ್ತದೆ.

.

ಅವಲೋಕನದ ಮೂಲಕ ಮಕ್ಕಳ ಜ್ಞಾನ, ಯೋಚನೆ, ಸಂಸ್ಕೃತಿ ಮತ್ತು ಆಸಕ್ತಿಗಳ ಬಗೆಗೆ ತಿಳಿದುಕೊಳ್ಳಲು ಈ ಕೆಳಗಿನ ಇ-ನ್ಯೂಸ್-ಲೆಟರ್ ಕಾರ್ಯಸಾಧುವಾದ ಚಿಂತನೆಗಳನ್ನು ಒದಗಿಸುತ್ತದೆ. ಈ ಬಗ್ಗೆ ಮಾಹಿತಿಗೆ ಈ ಮುಂದಿನ ಲಿಂಕ್ ಕ್ಲಿಕ್ ಮಾಡಿ: NQS PLP e-Newsletter No. 39 2012 – Observing children.

## ಅಂತರ್ವಿಷ್ಟ ಪರಿಸರಗಳು

ಉತ್ತಮ ಗುಣಮಟ್ಟದ ಆರಂಭಿಕ ಬಾಲ್ಯದ ಶಿಕ್ಷಣ ಮತ್ತು ಆರೈಕೆಯ ಮಹತ್ವ ಉತ್ತಮವಾಗಿ ದಾಖಲಾಗಿದೆ. (Dahlberg, Moss, & Pence, 2007; Dearing, McCartney & Taylor, 2009; Peisner-Feinberg et al., 2014; Sylva, 2010, Torii, Fox & Cloney, 2017). ಉತ್ತಮ ಗುಣಮಟ್ಟದ ಅಂತರ್ವಿಷ್ಟ ಆರಂಭಿಕ ಬಾಲ್ಯ ಸನ್ನಿವೇಶಗಳು ಮಕ್ಕಳು ಧನಾತ್ಮಕ ಅನನ್ಯತೆ ಮತ್ತು ಸ್ವಕೀಯತೆಯ ಭಾವನೆ ಬೆಳೆಸಿಕೊಳ್ಳಲು ಮತ್ತು ಅವರ ಸಾಮರ್ಥ್ಯವನ್ನು ಸಂಪೂರ್ಣವಾಗಿ ಸಾಕಾರಗೊಳಿಸಿಕೊಳ್ಳುವುದನ್ನು ಬೆಂಬಲಿಸಲು ಬಹುಮುಖ್ಯವಾಗಿದೆ. ಮಕ್ಕಳ ಹಕ್ಕುಗಳನ್ನು ಯಶಸ್ವೀಗೊಳಿಸಲು ಇಸಿಇಸಿಯಲ್ಲಿ ಮಕ್ಕಳ ಧನಾತ್ಮಕ ವೈಯುಕ್ತಿಕ ಮತ್ತು ಗುಂಪು ಅನನ್ಯತೆಯನ್ನು ಬೆಂಬಲಿಸುವುದು ಅತ್ಯಂತ ಮುಖ್ಯ. ಒಳಗೊಳ್ಳುವ ಪರಿಸರವು ಸಾಮರ್ಥ್ಯ, ಸಂಸ್ಕೃತಿ, ಲಿಂಗ, ವರ್ಗ, ಜನಾಂಗೀಯತೆ, ಭಾಷೆ, ಧರ್ಮ, ಲೈಂಗಿಕತೆ ಮತ್ತು ಕುಟುಂಬದ ರಚನೆಯನ್ನು ಸಮಾಜದ ಅವಿಭಾಜ್ಯ ಅಂಗ ಎಂದು ಮಾನ್ಯಮಾಡಲು ಅವಕಾಶ ಒದಗಿಸುತ್ತದೆ.(ಕ್ವೀನ್ಸ್-ಲ್ಯಾಂಡ್ ಸರ್ಕಾರದ ಶಿಕ್ಷಣ ಇಲಾಖೆ, 2018ಬಿ).

ಎಚ್ಚರಿಕೆಯಿಂದ ಯೋಜಿಸಲಾದ ಪರಿಸರದಿಂದ ಮಕ್ಕಳು ಸಹ-ರಚನೆಯ ಕಲಿಕೆ ಮತ್ತು ಗಹನವಾದ ತಿಳುವಳಿಕೆಯಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುತ್ತದೆ (ಕ್ವೀನ್ಸ್-ಲ್ಯಾಂಡ್ ಅಧ್ಯಯನ ಪ್ರಾಧಿಕಾರ, 2010). ಶಿಕ್ಷಕರ ಮನಸ್ಸಿನಲ್ಲಿರುವ ಮಗುವಿನ ಚಿತ್ರ ಮತ್ತು ಅವರು ಸೃಷ್ಟಿಸುವ ವಾತಾವರಣ ಒಂದಕ್ಕೊಂದು ಬಲವಾದ ಸಂಬಂಧವನ್ನು ಹೊಂದಿದೆ. ಪ್ರತಿಯೊಂದು ಮಗುವನ್ನೂ ಒಳಗೊಳ್ಳುವ ವಾತಾವರಣವನ್ನು ಸೃಷ್ಟಿಸುವುದರ ಅರ್ಥ ಮಗುವನ್ನು ಪ್ರಗತಿಹೊಂದಲು ಬೆಂಬಲಿಸುವುದು ಮತ್ತು ವೈವಿಧ್ಯತೆಗೆ ಗೌರವ ಹಾಗೂ ಮೌಲ್ಯ ಕಲ್ಪಿಸುವುದು. ಉನ್ನತ ಗುಣಮಟ್ಟದ ಶಿಕ್ಷಣ ಮತ್ತು ಕಾಳಜಿಯು ಮಕ್ಕಳ ವಿಕಾಸ ಮತ್ತು ಕಲಿಕೆಗೆ ಆಧಾರವಾಗುವ ಉದ್ದೇಶಪೂರ್ವಕ, ಸಂರಚಿತ ಅಂತರಕ್ರಿಯೆಗಳನ್ನು ಬೆಂಬಲಿಸುವಂತಹ ವಿಚಾರಪೂರ್ಣವಾಗಿ ವಿನ್ಯಾಸಗೊಳಿಸಲಾದ ವಾತಾವರಣದ ಗುಣ ಹೊಂದಿರುತ್ತದೆ. ಗುಣಮಟ್ಟದಿಂದ ಕೂಡಿದ ಮಗುವಿನ ಪಾಲನೆ ಮಕ್ಕಳ ಸಂವೇಗಾತ್ಮಕ, ಸಾಮಾಜಿಕ ಮತ್ತು ಬೌದ್ಧಿಕ ವಿಕಾಸಕ್ಕೆ ಕಾರಣವಾಗುತ್ತದೆ.

ಒಳಗೊಳ್ಳುವ ವಾತಾವರಣವನ್ನು ಸೃಷ್ಟಿಸುವಲ್ಲಿ ಭೌತಿಕ ವಾತಾವರಣದ ಕಡೆಗೆ ಹೆಚ್ಚಿನ ಗಮನವನ್ನು ನೀಡುವುದು ಆರಂಭಿಕ ಹಂತ. ಭೌತಿಕ ವಾತಾವರಣ ಮಗುವಿನ ಅಗತ್ಯಗಳನ್ನು ಪೂರೈಸುವುದೇ ಮತ್ತು ಅದರ ಆಸಕ್ತಿಯನ್ನು ಕೆರಳಿಸುವ ವಿಷಯಗಳ ಜೊತೆಗೆ ಸಹಜವಾಗಿ ತೊಡಗಿಸಿಕೊಳ್ಳುವಂತೆ ಮಾಡುವಲ್ಲಿ ಮಗುವಿಗೆ ಸಹಾಯ ಮಾಡುವುದೇ? ಭೌತಿಕವಾಗಿ ಒಳಗೊಂಡ ತಾಣಗಳು ಪ್ರತಿ ಮಗುವಿಗೆ ಈ ಕೆಳಗಿನ ಅವಕಾಶವನ್ನು ನೀಡುತ್ತದೆ:

- ಸ್ವತಂತ್ರವಾಗಿ ಒಳಾಂಗಣ ಮತ್ತು ಹೊರಾಂಗಣ ಪ್ರದೇಶಗಳಲ್ಲಿ ಹೋಗುವ ಮತ್ತು ಅನ್ವೇಷಿಸುವ ಅವಕಾಶ;

- ತಾವು ಪಡೆಯುವ ಸಂಪನ್ಮೂಲಗಳಲ್ಲಿ ಮತ್ತು ತಾವು ಭಾಗವಹಿಸುವ ಅನುಭವವಗಳನ್ನು ಆಯ್ಕೆಮಾಡುವುದು;
- ಇತರ ಮಕ್ಕಳು ಮತ್ತು ಪ್ರೌಢರ ಜೊತೆ ಅರ್ಥಪೂರ್ಣವಾದ ಅಂತರಕ್ರಿಯೆ ನಡೆಸುವುದು;
- ಸಾಧ್ಯವಾದಷ್ಟು ಸ್ವತಂತ್ರವಾಗಿ ತಮ್ಮ ಬಗ್ಗೆ ಕಾಳಜಿ ವಹಿಸುವುದು;
- ಸವಾಲನ್ನು ಮತ್ತು ನಿಭಾಯಿಸಬಹುದಾದ ಅಪಾಯಗಳನ್ನು ಎದುರುಗೊಳ್ಳುವುದು;
- ಸಮುದಾಯಗಳಿಗೆ ನಾನಾ ರೀತಿಯಿಂದ ಕೊಡುಗೆಯನ್ನು ನೀಡುವ ಮತ್ತು ಸಕ್ರಿಯವಾಗಿ ಭಾಗಿಯಾಗುವ, ಅಂಗವಿಕಲತೆಯನ್ನು ಹೊಂದಿರುವ ವ್ಯಕ್ತಿಗಳನ್ನು ಬಿಂಬಿಸುವ ಚಿತ್ರಗಳು, ಪುಸ್ತಕಗಳು ಮತ್ತು ಸಂಪನ್ಮೂಲಗಳಲ್ಲಿ ತೊಡಗಿಕೊಳ್ಳುವುದು(ಓವೆನ್ಸ್, 2012, ಪು.2).

| *ಚಿತ್ರ 4.5: ಹಸುಗಳೊಂದಿಗೆ ಮಗು* | |
|---|---|



ಭೌತಿಕ ವಾತಾವರಣವನ್ನು ಅಸಾಮರ್ಥ್ಯವಿರುವ ಮಗುವಿಗೆ ಹೊಂದಿಸುವಾಗ ಮಗು ತನ್ನ ದೈನಂದಿನ ನಿಯತಕಾರ್ಯಗಳನ್ನು ಮತ್ತು ಅನುಭವಗಳನ್ನು ಎಷ್ಟು ಸಾಧ್ಯವೋ ಅಷ್ಟು ಸ್ವತಂತ್ರವಾಗಿ ನಿಭಾಯಿಸಲು ಏನನ್ನು ಮಾಪರ್ಡಿಸುವ ಅಥವಾ ಸೇರಿಸುವ ಅಗತ್ಯವಿದೆ ಎಂದು ಗಮನಿಸುವುದು ಮುಖ್ಯ. ಮಗುವಿಗೆ ಸಂಪನ್ಮೂಲ ಬಳಸಿಕೊಳ್ಳುವುದು ಎಷ್ಟು ಸುಲಭ ಸಾಧ್ಯ? ಇಲ್ಲಿರುವ ವಸ್ತುಗಳನ್ನು ಮಗುವಿನ ಕೈಗೆ ಎಟುಕುವ ರೀತಿಯಲ್ಲಿ ಕಡಿಮೆ ಎತ್ತರದಲ್ಲಿ ಇಡಬೇಕಾದ ಅಗತ್ಯವಿದೆಯೇ? ಮಗುವಿಗೆ ಎಟುಕುವಂತೆ ವಸ್ತುಗಳನ್ನು ಬೇರೆ ಎತ್ತರದಲ್ಲಿ ಅಥವಾ ಮಟ್ಟದಲ್ಲಿ ಇಡಬೇಕೇ? ಪ್ರತಿಯೊಂದು ಮಗುವಿನ ಮಟ್ಟದಲ್ಲಿ ಹಾಗೂ ಗುಂಪಿನಲ್ಲಿ ನ್ಯಾಯಸಮ್ಮತವಾದ ಹಾಗೂ ಸಮಾನವಾದ ಸಂಗತಿಗಳನ್ನು ಪರಿಗಣಿಸುವುದು ಹಾಗೂ ಸೂಕ್ತವಾದ ಬದಲಾವಣೆಗಳನ್ನು ಕಲ್ಪಿಸುವುದರಿಂದ ವಿವಿಧ ಹಿನ್ನೆಲೆಯ ಮಕ್ಕಳು ತರಗತಿಯ ಪಠ್ಯಕ್ರಮದಲ್ಲಿ ಭಾಗಿಯಾಗಲು ಸಾಧ್ಯವಾಗುತ್ತದೆ. ಇದೂ ಕೂಡ ಒಂದು ಪರಿಣಾಮಕಾರಿ ಕಾರ್ಯತಂತ್ರವೂ ಆಗಿದೆ (ಡೈಮಂಡ್ & ಹ್ಯಾಂಗ್ 2010). ಉದಾಹರಣೆಗೆ, ಎಲ್ಲಾ ಮಕ್ಕಳಿಗೂ ವರ್ಣಚಿತ್ರ ಚಟುವಟಿಕೆಯನ್ನು ಚಿತ್ರಾಧಾರದಿಂದ (easel ) ಮೇಜಿಗೆ ವರ್ಗಾಯಿಸುವುದು ಸುದೀರ್ಘ ಕಾಲ ನಿಂತು ವರ್ಣಚಿತ್ರ ಮಾಡಲು ಕಷ್ಟಪಡುವ ಮಕ್ಕಳಿಗೆ ಬೆಂಬಲ ಒದಗಿಸುತ್ತದೆ.(ಸ್ಯಾಂಡಾಲ್ ಮತ್ತು ಸ್ಕವಾರ್ಟ್, 2008).

ಒಳಾಂಗಣ ಮತ್ತು ಹೊರಾಂಗಣ ವಾತಾವರಣಕ್ಕೆ ತಕ್ಕಂತೆ ಬದಲಾವಣೆಗಳನ್ನು ಮಾಡಿಕೊಳ್ಳುವುದರಿಂದ ಮಕ್ಕಳು ಹೆಚ್ಚು ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಅವಕಾಶವಾಗುತ್ತದೆ. ಇದು ಸಹಪಾಠಿಗಳೊಂದಿಗೆ ಅಂತರಕ್ರಿಯೆ ನಡೆಸಲು ಪರಿಣಾಮಕಾರಿಯಾಗಿರುತ್ತದೆ (ಡೈಮಂಡ್ & ಹ್ಯಾಂಗ್ 2010). ಉದಾಹರಣೆಗೆ ಸಂವಹನದಲ್ಲಿ ಸಮಸ್ಯೆ

ಇರುವ ಮಗು ದೃಶ್ಯ ಸಂಬಂಧಿ ಸಂಪನ್ಮೂಲಗಳನ್ನು ಬಳಕೆ ಮಾಡುವುದರಿಂದ ಹೆಚ್ಚು ಪ್ರಯೋಜನ ಪಡೆಯಬಹುದು. ಅಂದರೆ ದಿನಚರಿ ಮತ್ತು ಚಟುವಟಿಕೆಗಳನ್ನು ಅರ್ಥ ಮಾಡಿಕೊಳ್ಳಲು ಹಾಗೂ ಭಾಗವಹಿಸಲು ಚಿತ್ರಗಳನ್ನು ಒಳಗೊಂಡ ಚಾರ್ಟ್ ಗಳನ್ನು ಬಳಸಿಕೊಳ್ಳಬಹುದು (ಓವೆನ್ಸ್, 2012). ದೃಶ್ಯ ಸಂಬಂಧಿ ಸಂಪನ್ಮೂಲಗಳನ್ನು ಪರಿಚಯ ಮಾಡಿಕೊಳ್ಳುವಂತೆ ಎಲ್ಲ ವಿದ್ಯಾರ್ಥಿಗಳಿಗೆ ಆಹ್ವಾನವನ್ನು ನೀಡುವುದು ಮತ್ತು ಆ ಬಗ್ಗೆ ಖಾತರಿ ಇಲ್ಲದವರಿಗೆ ಬೆಂಬಲ ನೀಡುವಂತೆ ಉತ್ತೇಜನ ನೀಡುವುದು ಇನ್ನೊಂದು ಉಪಯುಕ್ತ ಕಾರ್ಯತಂತ್ರ. ತೀವ್ರತರದ ಆತಂಕಕ್ಕೆ ಒಳಗಾಗುವ ಅಥವಾ ವರ್ತನೆ ಸಂಬಂಧಿ ಸಮಸ್ಯೆಗಳಿರುವ ಮಗು ಹೆಚ್ಚು ಭಾವೋದ್ವೇಗಕ್ಕೆ ಒಳಗಾದಾಗ ಅಥವಾ ಗುಂಪಿನಿಂದ ದೂರ ಉಳಿಯಬೇಕು ಅನಿಸಿದಾಗ ಸುರಕ್ಷಿತ ಪ್ರಶಾಂತ ಜಾಗ ಬೇಕಾಗಬಹುದು (ಓವೆನ್ಸ್, 2012). ವಾತಾವರಣಕ್ಕೆ ಇಂತಹ ಸೇರ್ಪಡೆಗಳನ್ನು ಮಾಡಿದಾಗ ಕೆಲವೊಮ್ಮೆ ಎಲ್ಲ ಮಕ್ಕಳಿಗೂ ಪ್ರಯೋಜನವಾಗುತ್ತದೆ.

ಮಕ್ಕಳು ತಮ್ಮ ಕಲಿಕೆಗಾಗಿ ತರಗತಿಯ ಸಂಪನ್ಮೂಲಗಳನ್ನು ಬಳಸುವ ಕಾರಣ ಅವರ ಸ್ವಾತಂತ್ರ್ಯವನ್ನು ಬೆಂಬಲಿಸುವ ಕಾರ್ಯತಂತ್ರಗಳನ್ನು ಸೇರ್ಪಡೆ ಮಾಡುವುದರಿಂದ ಹೆಚ್ಚು ಲಾಭವಾಗುತ್ತದೆ. ಕಲಿಕಾರ್ಥಿಗಳ ಸ್ವಾತಂತ್ರ್ಯಕ್ಕಾಗಿ ಶಿಕ್ಷಕರು ತರಗತಿಗಳಲ್ಲಿ ಸಾಕಷ್ಟು ಆಲೋಚನೆಗಳು ಮತ್ತು ಕಾರ್ಯತಂತ್ರಗಳನ್ನು ಬಳಸಿಕೊಳ್ಳಬೇಕು. ಕ್ವೀನ್ಸ್-ಲ್ಯಾಂಡಿನ ಪ್ರಾಥಮಿಕ ಶಾಲೆಯಲ್ಲಿ ಎಲ್ಲರನ್ನು ಒಳಗೊಳ್ಳುವ ತರಗತಿಯನ್ನು ಸೃಷ್ಟಿಸಲು ಶಿಕ್ಷಕರೊಬ್ಬರು ಬಳಸಿದ ನಾನಾ ಯೋಚನೆಗಳ ಬಗೆಗೆ ಈ ಕೆಳಗಿನ ಸಂಪನ್ಮೂಲಗಳನ್ನು ಗಮನಿಸಿ ಮತ್ತು ನೋಟ್ ಮಾಡಿಕೊಳ್ಳಿ. ನಿಮ್ಮದೇ ಆದ ಕಾರ್ಯತಂತ್ರಗಳ ಸಂಗ್ರಹ ಮಾಡಿಕೊಳ್ಳಲು ಈ ವಿಚಾರಗಳನ್ನು ಬಳಸಿಕೊಳ್ಳಿ ಮತ್ತು ಒಳಗೊಳ್ಳುವ ತರಗತಿಗಳನ್ನು ರೂಪಿಸುವ ಸಂದರ್ಭದಲ್ಲಿ ಈ ಐಡಿಯಾಗಳ ಪಟ್ಟಿಯನ್ನು ಬೆಳೆಸುತ್ತ ಹೋಗಿ.

**ಸಾಂಸ್ಕೃತಿಕ ದಕ್ಷತೆ****

**(***ಗಮನಿಸಿ: competence ಎಂದರೆ competition ಅಲ್ಲ.** physical environment **ಎಂದರೆ ದೈಹಿಕ ಅಲ್ಲ, ಭೌತಿಕ ವಾತಾವರಣ )**

ಭೌತಿಕವಾಗಿ ಅಂರ್ತವಿಷ್ಟವಾದ ವಾತಾವರಣ ಸೃಷ್ಟಿಸುವಾಗ, ಒಂದು ಒಳಗೊಂಡಿರುವ ಸಹಭಾಗೀ ಸಂಸ್ಕೃತಿಯ ಮಾದರಿಮಾಡಿ ಅದನ್ನು ಬೆಂಬಲಿಸಬಹುದು. ತಮ್ಮ ಅನನ್ಯತೆಯ ಭಾವನೆಯನ್ನು ಬೆಳೆಸಿಕೊಳ್ಳುವಾಗ ಮಕ್ಕಳು ಸಹಜವಾಗಿಯೇ ತಮ್ಮ ಸುತ್ತಮುತ್ತ ಇರುವ ಜನರ ಬಗ್ಗೆ ಕುತೂಹಲಕ್ಕೆ ಒಳಗಾಗಿರುತ್ತಾರೆ. ಇದನ್ನು ಸಾಧಿಸಲು ಇರುವ ಒಂದು ಮಾರ್ಗವೆಂದರೆ ಯಾವುದು ತಮ್ಮನ್ನು ಇತರರಿಗಿಂತ ಭಿನ್ನವಾಗಿಸುತ್ತದೆ ಎಂಬುದನ್ನು ವ್ಯಾಖ್ಯಾನಿಸುವುದು. ಒಂದು ಮಗು, ಸುಲಭವಾಗಿ ಗುರುತಿಸಬಹುದಾದ ಲಕ್ಷಣಗಳಾದ ಚರ್ಮದ ಬಣ್ಣ, ಮಾತನಾಡುವ ಶೈಲಿ ಅಥವಾ ಉಡುಪು ಧರಿಸುವ ರೀತಿ ಮುಂತಾದವುಗಳ ಬಗ್ಗೆ ಪ್ರಶ್ನೆಗಳನ್ನು ಕೇಳಬಹುದು. "ಎರಡು ಅಥವಾ ಮೂರು ವರ್ಷದವರಾಗಿದ್ದಾಗ ಮಕ್ಕಳು ಜನರ ದೈಹಿಕವಾದ ಭಿನ್ನತೆಗಳನ್ನು ಗುರುತಿಸಲು ಶುರುಮಾಡುತ್ತಾರೆ" (ಕುಪೆಜ್, 2012, ಪುಟ-1). "ಕಿಯಾಳ ಚರ್ಮ ಯಾಕೆ ಕಂದು ಬಣ್ಣದ್ದಾಗಿದೆ?" ಎನ್ನುವಂತಹ ಪ್ರಶ್ನೆಗಳು ಯಾರನ್ನಾದರೂ ಅವಮಾನಿಸುವ ಅಥವಾ ನೋವು ಮಾಡುವ ಉದ್ದೇಶವನ್ನು ಹೊಂದಿರುವುದಿಲ್ಲ. ಪ್ರತಿಯೊಂದು ವೈವಿಧ್ಯತೆಯ ಬಗ್ಗೆಯೂ ನ್ಯಾಯಸಮ್ಮತವಾದ ಮತ್ತು ಕರಾರುವಕ್ಕಾದ ಸಂದೇಶವನ್ನು ಕಳಿಸಲು ಶಿಕ್ಷಕರು ಇಂತಹ ಅವಕಾಶಗಳನ್ನು ಬಳಸಿಕೊಳ್ಳಬಹುದು. ಇದರಿಂದ ಇಂತಹ ವ್ಯತ್ಯಾಸಗಳು ವ್ಯಕ್ತಿಯನ್ನು ಭಿನ್ನವಾಗಿ ಮಾಡುತ್ತದೆ ಎಂಬುದನ್ನು ಕಲಿತುಕೊಳ್ಳುತ್ಥಾರೆ. ಎಲ್ಲ ಮಕ್ಕಳ ಕಲಿಕೆಯನ್ನು ಸಮೃದ್ಧಗೊಳಿಸಲು ಈ ವೈವಿಧ್ಯತೆಯ ಪ್ರಕ್ರಿಯೆಯನ್ನು ಶಿಕ್ಷಕರು ಬಳಸಿಕೊಳ್ಳಬಹುದು.

ತಾವು ಎಲ್ಲರಿಗಿಂತ ಭಿನ್ನ ಎಂಬುದನ್ನು ಪರಿಚಯ ಮಾಡಿಕೊಳ್ಳಲು, ಅರ್ಥಮಾಡಿಕೊಳ್ಳಲು ಹಾಗೂ ಅನುಭವಿಸಲು ಮಕ್ಕಳಿಗೆ ಬೆಂಬಲವಾಗಿ ನಿಲ್ಲಲು ಶಿಕ್ಷಕರು ಈ ಪಾಡ್-ಕಾಸ್ಟ್ ಅವಕಾಶವನ್ನು ಪಡೆದುಕೊಳ್ಳಬೇಕು. ಬಾಲ್ಯಾವಸ್ಥೆಯ ವ್ಯಾಪ್ತಿಯಲ್ಲಿಯೇ ವೈವಿಧ್ಯತೆಯನ್ನು ಹೊಂದಲು ಕೆಲವು ಸರಳ ಉದಾಹರಣೆಗಳನ್ನು ಎನ್ಎಸ್.ಡಬ್ಲ್ಯು (2011)ಶಿಫಾರಸು ಮಾಡಿದೆ:

- ಒಂದು ನಕಾಶೆಯನ್ನು ನೇತುಹಾಕಿ ಅದರಲ್ಲಿ ಮಗುವಿನ ಹೆಸರು ಮತ್ತು ಅದರ ದೇಶದ ಮೂಲ ಯಾವುದು ಎಂಬುದಕ್ಕೆ ಸ್ಥಳವನ್ನು ಟ್ಯಾಗ್ ಮಾಡುವ ಮೂಲಕ ಎಲ್ಲ ಮಕ್ಕಳನ್ನೂ ಕೂಡ ಗುರುತಿಸುವ ಪ್ರಯತ್ನವನ್ನು ಮಾಡುವುದು.
- ಪ್ರತಿ ವಾರ ಅಥವಾ ಒಂದು ತಿಂಗಳು ಒಂದು ದೇಶವನ್ನು ತೋರಿಸುವ ಮೂಲಕ ಪಾಲಕರಿಗೆ ಆಹ್ವಾನವನ್ನು ನೀಡಿ ಅವರ ಭಾಷೆ, ಹಾಡು, ಸಂಗೀತ, ಆಹಾರ, ಸಾಂಪ್ರದಾಯಿಕ ನೃತ್ಯ ಮತ್ತು ವೇಷಭೂಷಣಗಳ ಕುರಿತು ಅಭಿಪ್ರಾಯಗಳನ್ನು ಹಂಚಿಕೊಳ್ಳುವಂತೆ ಕೇಳಿಕೊಳ್ಳಬಹುದು.
- ವರ್ಷವಿಡೀ ಸಾಂಸ್ಕೃತಿಕವಾಗಿ ಭಿನ್ನವಾಗಿರುವ ಕ್ಯಾಲೆಂಡರ್ ವೇಳಾಪಟ್ಟಿಯಂತೆ ಕಾರ್ಯಕ್ರಮಗಳನ್ನು ಆಚರಣೆ ಮಾಡಬಹುದು.
- ಬಹುಸಂಸ್ಕೃತಿಯ ಮತ್ತು ಬಹುಭಾಷೆಯ ಸಂಪನ್ಮೂಲಗಳು ಯಾವತ್ತೂ ಲಭ್ಯವಾಗುವಂತೆ ಮಾಡಿ ಮತ್ತು ಅದನ್ನು ಪ್ರದರ್ಶಿಸಿ.

ಆದರೆ ಕೇವಲ ಸಾಂಸ್ಕೃತಿಕ ಜಾಗೃತಿಯನ್ನು ಹೆಚ್ಚಿದರೆ ಮಾತ್ರ ಸಾಕಾಗುವುದಿಲ್ಲ. ಶಿಕ್ಷಕರು ಕೂಡ ಸಾಂಸ್ಕೃತಿಕವಾಗಿ ಸಮರ್ಥರಾಗಿರುವಂತೆ ಮಾಡಬೇಕಾದ ಅಗತ್ಯವಿದೆ. ಸಾಂಸ್ಕೃತಿಕವಾಗಿ ಸಮರ್ಥವಾಗುವುದು ಎಂದರೆ ಈ ಕೆಳಗಿನ ಯೋಚನೆಗಳು ಮತ್ತು ಕ್ರಮಗಳಿಗೆ ಅದು ದಾರಿಮಾಡಿಕೊಡಬೇಕು.

- ಜನರ ನಡುವೆ ಅರಿವು ಮೂಡಿಸುವುದು;
- ವಿಭಿನ್ನ ಸಾಂಸ್ಕೃತಿಕ ದೃಷ್ಟಿಕೋನಗಳಿಗೆ ಗೌರವ ಮತ್ತು ಮುಕ್ತವಾಗಿರುವುದು.
- ಅವಕಾಶಗಳಲ್ಲಿ ಸಮಾನತೆಯನ್ನು ಧೃಢಗೊಳಿಸುವುದು (ಎಸಿಇಸಿಕ್ಯೂಎ ನ್ಯೂಸ್-ಲೆಟರ್, 2014).

ಎಸಿಇಸಿಕ್ಯೂಎ ಪ್ರಕಟಿಸುವ We Hear You ನ್ಯೂಸ್-ಲೆಟರ್ ಮೂಲಕ ಸಾಂಸ್ಕೃತಿಕ ದಕ್ಷತೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಓದಿ,

## ಉದ್ದೇಶಪೂರ್ವಕ ಕಲಿಕೆ

ಆರಂಭಿಕ ಬಾಲ್ಯದ ಕಲಿಕಾ ಚೌಕಟ್ಟಿನಲ್ಲಿ ಅರ್ಥಪೂರ್ಣವಾದ, ಚಿಂತನಾರ್ಹವಾದ ಮತ್ತು ಅಗತ್ಯದಿಂದ ಕೂಡಿದ ಬೋಧನೆಯನ್ನು ವಿಶ್ಲೇಷಿಸಲು 'ಉದ್ದೇಶಪೂರ್ವಕ ಬೋಧನೆ' ಎಂಬ ಪದವನ್ನು ಬಳಕೆ ಮಾಡಲಾಗುತ್ತದೆ (ಶಿಕ್ಷಣ ಇಲಾಖೆ, ಉದ್ಯೋಗ ಮತ್ತು ಉದ್ಯೋಗಸ್ಥಳದ ಸಂಬಂಧಗಳು 2009). ಈ ವ್ಯಾಖ್ಯಾನದಲ್ಲಿ 'ಉದ್ದೇಶಪೂರ್ವಕ' ಎನ್ನುವ ಪದ ಮುಖ್ಯ ಏಕೆಂದರೆ ಇದು ಉದ್ದೇಶವುಳ್ಳ ಶಿಕ್ಷಕರ ಕೆಲಸ ಸಂಭಾವ್ಯ ಪರಿಣಾಮಗಳ ಬಗ್ಗೆ ಆಳವಾದ ಆಲೋಚನೆಯಿಂದ ಹೊರಹೊಮ್ಮಿರುತ್ತದೆ ಎಂದು ಭಾವಿಸಲಾಗುತ್ತದೆ (ಎಪಿಸ್ಟೀನ್, 2007). ಎಪಿಸ್ಟೀನ್ ಇದನ್ನು ಮುಂದುವರಿಸುತ್ತಾ,  ಇದರರ್ಥ ಶಿಕ್ಷಕರು ತಾವು ಮಾಡುತ್ತಿರುವುದನ್ನು ತಾವು ಏಕೆ ಮಾಡುತ್ತಿದ್ದೇವೆ ಎನ್ನುವುದನ್ನು( ಉದ್ದೇಶಪೂರ್ವ ಕ್ರಿಯೆ)  ಹಾಗೂ ಬೋಧನಾರ್ಹವಾದ ಕ್ಷಣಕ್ಕೆ ಅಗತ್ಯವಿರುವ ಕಾರ್ಯತಂತ್ರವೇನು ಎಂದು ತಿಳಿದಿರುತ್ತಾರೆ ಎಂದಿದ್ದಾರೆ.

ಅಸಮರ್ಥತೆ** ಇರುವ ಮಕ್ಕಳ ಮತ್ತು ಅಸಮರ್ಥತೆ ಇಲ್ಲದಿರುವ ಅವರ ಸಹಪಾಠಿಗಳ ನಡುವೆ ಅಂತರಕ್ರಿಯಗಳನ್ನು ಬೆಂಬಲಿಸಲು ಇರವ ಅನೇಕ ಪರಿಣಾಮಕಾರಿ ಉದ್ದೇಶಪೂರ್ವಕ ಪರಿಸರ ಕಾರ್ಯತಂತ್ರಗಳಲ್ಲಿ

ಗುಂಪಿನ ಗಾತ್ರವನ್ನು ಮಿತಗೊಳಿಸುವುದು ಮತ್ತು ಸಾಮಾಜಿಕ ಅಂತರಕ್ರಿಯೆಗಳನ್ನು ಪ್ರೋತ್ಸಾಹಿಸುವ ಪರಿಚಿತವಿರುವ ಸಾಮಗ್ರಿಗಳನ್ನು ಬಳಸುವುದು ಸೇರಿವೆ. ಒಳಗೊಳ್ಳುವ ಪರಿಸರದ ವ್ಯಾಪ್ತಿಯಲ್ಲಿ ಉದ್ದೇಶಪೂರ್ವಕ ಬೋಧನಾ ಕ್ರಮಗಳನ್ನು ಜಾರಿಗೆ ತರಲು ಆಸ್ಟ್ರೇಲಿಯಾ ಮಕ್ಕಳ ಶಿಕ್ಷಣ ಮತ್ತು ಪಾಲನೆ ಗುಣಮಟ್ಟ ಪ್ರಾಧಿಕಾರ (ಎಸಿಇಸಿಕ್ಯೂಎ-2017) ಈ ಕೆಳಗಿನ ಕಾರ್ಯತಂತ್ರಗಳನ್ನು ಸಲಹೆ ಮಾಡಿದೆ.

(** ಗಮನಿಸಿ disabilities ಎಂದರೆ ಅಂಗವಿಕಲತೆ ಎಂದಾಗುವುದಿಲ್ಲ. Disabilities ಮಾನಸಿಕ, ಕಲಿಕಾ ದುರ್ಬಲತೆ ಇರಬಹುದು. ಆದುದರಿಂದ disabilities ಎನ್ನುವುದನ್ನು ಅಂಗವಿಕಲತೆ ಎಂದು ಅನುವಾದ ಮಾಡುವುದು ತಪ್ಪಾಗುತ್ತದೆ)

### *ಸಮರ್ಪಕ ವರ್ತನೆಗಳನ್ನು ಮಾದರೀಕರಿಸುವುದು***

ಮಕ್ಕಳು ಅವಲೋಕನ ಮತ್ತು ಅನುಕರಣೆಯ ಮೂಲಕ ಕಲಿಯುತ್ತಾರೆ (ಮೆಟ್-ಝೂಫ್, Meltzoff 1999) ಮತ್ತು ಶಿಕ್ಷಕರಿಂದ ಮಾದರೀಕರಣ ಉದ್ದೇಶಪೂರ್ವಕ ಬೋಧನೆಗೆ ಶಕ್ತಿಶಾಲಿಯಾದ ಸಾಧನವಾಗುತ್ತದೆ. ಮಕ್ಕಳು ಹಿರಿಯರು ಜೊತೆಯಾಗಿ ಕೆಲಸಮಾಡುವುದು, ಸಹಕರಿಸುವುದು ಮತ್ತು ಸಕಾರಾತ್ಮ ವರ್ತನೆ ಮಾದರೀಕರಿಸುವುದನ್ನು ಗಮನಿಸುತ್ತಾರೆ.. ದೊಡ್ಡವರ ಈ ರೀತಿಯ ಮಾದರೀಕೃತ ವರ್ತನೆಯನ್ನು ಮಕ್ಕಳು ಅನುಕರಣೆ ಮಾಡುವುದರಿಂದ ಆರಂಭಿಕ ಬಾಲ್ಯ ಸನ್ನಿವೇಶದ ಒಳಗೂ ಮತ್ತು ಹೊರಗೂ ಪರಿಶೀಲಿಸಿರುವ ಚಟುವಟಿಕಗಳ ಅಂತರಸಂಬಂಧದ ಅರಿವನ್ನು ಬಲಪಡಿಸುತ್ತದೆ.

(ಗಮನಿಸಿ ** ಇದು ಮಾಡಲಿಂಗ್ ಅಥವಾ ಮಾದರಿಕರಣ ಎಂಬ ವರ್ತನಾತ್ಮಕ ವಿಧಾನವನ್ನು ಕುರಿತಾಗಿದೆ)

*ಚಿತ್ರ 4.6: ಮಕ್ಕಳೊಂದಿಗೆ ಸಂವಹನದಲ್ಲಿ ತೊಡಗಿರುವ ಶಿಕ್ಷಕಿ (2011). Monkey business.*



### *ವಿಸ್ತೃತ ಹರವಿನ ಸಂವಹನ ಕಾರ್ಯತಂತ್ರಗಳನ್ನು ಬಳಸುವುದು*

ಮಕ್ಕಳಿಗೆ, ಅದರಲ್ಲೂ ಅವರ ಸಾಮಾನ್ಯ ಅನುಭವಗಳಿಗೆ ಹೊರತಾದದ್ದನ್ನು ಎದುರಿಸಿದಾಗ, ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಸೂಕ್ತ ಪದಗಳು ಎಲ್ಲಸಮಯದಲ್ಲೂ ದೊರೆಯುವುದಿಲ್ಲ. ಎಲ್ಲಾ ಮಕ್ಕಳಿಗೂ ವಿಶಾಲ ಹರವಿನ ಸಂವಹನ ವಿಧಾನಗಳನ್ನು ಪರಿಚಯಿಸಿ, ಅವರು ತಮ್ಮ ಭಾವನೆಗಳನ್ನು ಸಂಘಟಿಸಿಕೊಳ್ಳಲು ಪ್ರಯತ್ನಿಸುವಾಗ ಅವನ್ನು ಬಳಸಲು ಸಿದ್ಧಮಾಡಿ, ಘಟನೆಗಳನ್ನು ವಿವರಿಸಿ ಮತ್ತು ಸಂಘರ್ಷಗಳನ್ನು ಪರಿಹರಿಸಿ. ನಾನಾ ರೀತಿಯ ಸಂವಹನ ಕಾರ್ಯತಂತ್ರಗಳಲ್ಲಿ ಅಭಿನಯದ, ಚಿತ್ರದ, ಮಾತಿನ ಹಾಗೂ ಲಿಖಿತ ಮಾರ್ಗಗಳು ಕೂಡ ಸೇರಿರಬಹುದು. ಕೆಲವು ವೇಳೆ ಮಕ್ಕಳಿಗೆ ಸೂಕ್ತ ಪದಗಳನ್ನು "ಕೊಡ" ಬೇಕಾದ ಅಗತ್ಯವಿರುತ್ತದೆ. ಉದಾಹರಣೆಗೆ ಈ

ಕೆಳಗಿನ ಸನ್ನಿವೇಶಗಳಲ್ಲಿ ಸ್ಯಾಮ್ ತನ್ನ ಯೋಚನೆಯನ್ನು ಈ ಪದಗಳಿಂದ ವ್ಯಕ್ತಪಡಿಸಲು ಶಿಕ್ಷಕರು ಸಹಾಯ ಮಾಡಿದರು:

Scenario

ಮರಳು ಗುಂಡಿಯ ಆಟ

ಸ್ಯಾಮ್ ( ಆಟದ) ಗುದ್ದಲಿ ಮತ್ತು ಕರಣೆಯಿಂದ ಮರಳಿನಲ್ಲಿ ರಸ್ತೆ ನಿರ್ಮಾಣ ಮಾಡುತ್ತಿದ್ದ. ಆತ ಕರಣೆಯನ್ನು ಕೈಗೆತ್ತಿಕೊಳ್ಳುವಾಗ ಗುದ್ದಲಿಯನ್ನು ನೆಲದ ಮೇಲಿಟ್ಟ. ಪೀಟರ್ ಪಕ್ಕಕ್ಕೆ ತಿರುಗಿ ಗುದ್ದಲಿಯನ್ನು ಎತ್ತಿಕೊಳ್ಳುತ್ತಾನೆ. ಸ್ಯಾಮ್ ತಕ್ಷಣ ಪೀಟರ್ ನನ್ನು ಮುಂದಕ್ಕೆ ತಳ್ಳಿ ಗುದ್ದಲಿಯನ್ನು ಮತ್ತೆ ಕೈಗೆತ್ತಿಕೊಳ್ಳುತ್ತಾನೆ. ಪೀಟರ್ ಗೆ ಏನೂ ಆಗಿಲ್ಲ ಎಂಬುದನ್ನು ಖಾತರಿಪಡಿಸಿಕೊಂಡ ಶಿಕ್ಷಕರು ಸ್ಯಾಮ್ ಗೆ ಹೇಳುತ್ತಾರೆ; "ನೀನು ಗುದ್ದಲಿ ಈಗಲೂ ಬಳಸುತ್ತಿರುವುದನ್ನು ನಾನು ನೋಡುತ್ತಿದ್ದೇನೆ ಆದರೆ ಪೀಟರ್ ಗಮನಿಸಿರಲಿಲ್ಲ. ನೀನು ದಯವಿಟ್ಟು ಪೀಟರ್ ಗೆ 'ನಾನಿನ್ನೂ ಈ ಗುದ್ದಲಿ ಬಳಸುತ್ತಿದ್ದೇನೆ?" ಎಂದು ಹೇಳಬಲ್ಲೆಯಾ? ಸ್ಯಾಮ್ ಶಿಕ್ಷಕರು ಹೇಳಿದಂತೆ ಮಾಡುತ್ತಾನೆ. ಪೀಟರ್ ತಲೆಯಾಡಿಸುತ್ತಾ ತನ್ನ ಮರುಳಿನ ನಿರ್ಮಾಣದ ಕೆಲಸಕ್ಕೆ ತೆರಳುತ್ತಾನೆ.

*ಸ್ವಯಂ ಸಂಭಾಷಣೆ (ಸ್ವಗತ) ಬಳಸುವುದು*

ಸ್ವಗತವನ್ನು ಮಕ್ಕಳಿಗೆ ಮಾರ್ಗದರ್ಶನದ ಶಕ್ತಿಯುತ ವಿಧಾನವಾಗಿ ಬಳಸಬಹುದು. ಶಿಕ್ಷಕರು ತಾವು ತೊಡಗಿರುವ ಚಟುವಟಿಕೆಯನ್ನು ಸಂಭಾಷಣೆಯೊಂದಿಗೆ ನಡೆಸಿದರೆ ಅದು ಮಕ್ಕಳಿಗೆ ಅವರ ಕೆಲಸದ ವಿವರಣೆ ನೀಡುತ್ತದೆ.. ಉದಾಹರಣೆಗೆ, "ನಾನೀಗ ಚಿತ್ರದ ಸುತ್ತಲೂ ಕತ್ತರಿಸುತ್ತಿದ್ದೇನೆ. ನಾನು ಎಚ್ಚರಿಕೆಯಿಂದ ಇದ್ದು ಕತ್ತರಿ ಗೆರೆಯ ಮೇಲೆ ಇರುವಂತೆ ಮಾಡಿದ್ದೇನೆ" ಎಂದು ಹೇಳಬಹುದು. ಮಕ್ಕಳು ಹೀಗೆ ಮಾಡುತ್ತಿದ್ದಾಗಲೇ ಶಿಕ್ಷಕರು ಕೂಡ ಪೂರಕವಾಗಿ ವಿವರಣೆಯನ್ನು ಕೊಡಬಹುದು. ಈ ಎರಡೂ ಕಾರ್ಯತಂತ್ರಗಳು ಅಲ್ಪಾವಧಿಗೆ ಸಹಕಾರಿಯಾಗಬಹುದು ಆದರೆ ಅವನ್ನು ಮಕ್ಕಳ ಕೆಲಸದಲ್ಲಿ ತಲೆದೂರುವ ಮತ್ತು ಅಡ್ಡಪಡಿಸುವ ಮಟ್ಟಕ್ಕೆ ಒಯ್ಯಬಾರದು.

*ಅಗತ್ಯವಿದ್ದಾಗ ದೃಢವಾಗಿರುವುದು*

ಮಕ್ಕಳಿಗೆ ನಮಗೆ ಕೆಲವು ಮಿತಿಗಳಿವೆ ಮತ್ತು ತಮ್ಮ ವರ್ತನೆಗೆ ಸಹಾಯ ಬೇಕಾದಾಗ ಅದು ಒದಗುತ್ತದೆ ಎಂಬ ಅರಿವಿನಿಂದ ಉಂಟಾಗುವ ಭರವಸೆಯ ಅಗತ್ಯವಿರುತ್ತದೆ. ಮಕ್ಕಳಿಗೆ ಪ್ರೌಢರು ವಿವೇಚನೆಯುಳ್ಳ ಎಲ್ಲೆಗಳನ್ನು ನಿರ್ದಿಷ್ಟಗೊಳಿಸಿ ಅವರ ಭಾವನೆಗಳು ಮತ್ತು ಪ್ರತಿಕ್ರಿಯೆಗಳನ್ನು ಸಂಘಟಿಸಲು ಸಹಾಯ ಮಾಡಬೇಕಾದ ಅಗತ್ಯವಿರುತದೆ. ಮಕ್ಕಳ ಕಲಿಕೆಗೆ ಸಹಾಯವಾಗಬಲ್ಲ ಸೂಕ್ತ ಹಾಗೂ ಸಮಾನ ನಿರ್ಣಯಕ್ಕಾಗಿ ಹುಡುಕಾಟ ನಡೆಸುತ್ತಿದ್ದ ಸಂದರ್ಭದಲ್ಲಿ ಇತರರ ವಿಚಾರದಲ್ಲಿ ದಾಕ್ಷಿಣ್ಯ ತೋರಿದ್ದರಿಂದಾದ ಫಲಿತಾಂಶಗಳ ಬಗ್ಗೆ ಗಮನ ಹರಿಸಲು ಶಿಕ್ಷಕರು ಮಕ್ಕಳಿಗೆ ಬೆಂಬಲ ನೀಡಬಹುದು.

## *ದಾಕ್ಷಿಣ್ಯಪರ ವರ್ತನೆಗೆ ಮಾನ್ಯತೆನೀಡುವುದು*

ಮಕ್ಕಳಲ್ಲಿ ನೀವು ಯಾವುದನ್ನು ಹೆಚ್ಚು ನೋಡಬಯಸುತ್ತೀರೋ ಅದರಂತೆ ಅವರು ನಡೆದುಕೊಂಡಾಗ, ಅವರಿಗೆ ಅದು ತಿಳಿಯುವಂತೆ ಮಾಡಿ. ಮಕ್ಕಳು ತಮ್ಮ ವರ್ತನೆಯನ್ನು ತಾವೇ ನಿಭಾಯಿಸಲು "ನಿನಗೆ ಇದನ್ನು ಮಾಡುವುದು ಕಷ್ಟ ಎಂಬುದು ನನಗೆ ಗೊತ್ತಿದೆ, ಆದರೆ ಈ ವಿಚಾರದಲ್ಲಿ ನಾನು ನಿನಗೆ ಸಹಾಯ ಮಾಡುತ್ತೇನೆ ಎನ್ನುವಂತೆ ಬೆಂಬಲಿಸಲು ಪ್ರಯತ್ನಿಸಿ. ತದಾನುಭೂತಿಯನ್ನು ಮಾದರೀಕರಿಸುವುದು ಮಕ್ಕಳಿಗೆ ತಾವೇ ಬಳಸಬಹುದಾದ ಉದಾಹರಣೆಗಳು ಮತ್ತು ಕಾರ್ಯತಂತ್ರಗಳ ಸಂಗ್ರಹ ಒದಗಿಸುತ್ತದೆ. ಇಲ್ಲಿ ಒತ್ತು ನೀಡುವುದು ಮಕ್ಕಳು ತಮ್ಮ ವರ್ತನೆಯನ್ನು ತಾವೇ ನಿಭಾಯಿಸಿಕೊಳ್ಳುವುದನ್ನು ಗೌರವವನ್ನು ಕಲಿಯುವ ಮತ್ತು ಪದರ್ಶಿಸುವ ರೀತಿಯಲ್ಲಿ

ಬೆಂಬಲಿಸುವುದು. ಮಗುವಿನ ಒಂದು ವರ್ತನೆಗೆ ಪ್ರತಿಕ್ರಿಯೆ ನೀಡುವಾಗ ಅವರ ಪ್ರತಿಷ್ಠೆ ಮತ್ತು ಹಕ್ಕುಗಳನ್ನು ಕಾಯ್ದುಕೊಳ್ಳುವ ರೀತಿಯಲ್ಲಿ ನೀವದನ್ನು ಮಾಡುತ್ತಿದ್ದೀರಿ ಎಂಬುದು ಖಾತರಿ ಮಾಡಿಕೊಳ್ಳಿ. ಇದನ್ನು ಮಾಡುವಾಗ ಸುಮ್ಮನೇ ಪ್ರತಿಕ್ರಿಯೆ ನೀಡುವುದಕ್ಕೆ ಬದಲಾಗಿ ಸಲ್ಪ ಯೋಚಿಸಿ ಉತ್ತಮ ಪ್ರತಿಕ್ರಿಯೆ ನೀಡುವುದು ಮುಖ್ಯ. ಹಾಗಿದ್ದೂ ಕೆಲವು ಪರಿಸ್ಥಿತಿಗಳಲ್ಲಿ, ಸುರಕ್ಷತೆಯ ವಿಚಾರ ಬಂದಾಗ ಶಿಕ್ಷಕರು ತಕ್ಷಣ ಪ್ರತಿಕ್ರಿಯೆ ನೀಡಬೇಕಾಗುತ್ತದೆ.

*ಚಿತ್ರ: 4.7: ಜಿಗಿದಾಡುತ್ತಿರುವ ಮಗುವಿನ ಚಿತ್ರ*



## ಉನ್ನತ ನಿರೀಕ್ಷೆಗಳು

ಪ್ರತಿಯೊಂದು ಮಗುವೂ ಅಸದೃಶ. ಮಕ್ಕಳು ಒಂದೇ ರೀತಿಯ ಅಸಾಮರ್ಥ್ಯವನ್ನು ಹಂಚಿಕೊಳ್ಳಬಹುದು, ಆದರೆ ಒಬ್ಬರಿಂದೊಬ್ಬರು ಮಿಕ್ಕೆಲ್ಲ ವಿಷಯಗಳಲ್ಲಿ ಸಂಪೂರ್ಣವಾಗಿ ಭಿನ್ನವಾಗಿರಬಹುದು. ಉದಾಹರಣೆಗೆ, ಕೆಲವು ಅಪವಾದಗಳಿದ್ದರೂ, ವಿಶೇಷ ಅಗತ್ಯವಿರುವ ಎರಡುವರ್ಷದ ಮಕ್ಕಳು ಬೇರೆಲ್ಲಾ ಎರಡು ವರ್ಷ ವಯಸ್ಸಿನವರು ಎದುರಿಸುವ ಸವಾಲುಗಳನ್ನೇ ಎದುರಿಸುತ್ತಾರೆ. ಪ್ರತಿಯೊಂದು ಮಗುವಿನ ವಿಷಯದಲ್ಲಿಯೂ ಉನ್ನತವಾದ ನಿರೀಕ್ಷೆಗಳನ್ನು ನಿಗದಿಪಡಿಸುವುದು ಅವರ ಸರ್ವತೋಮುಖ ಯಶಸ್ಸಿಗೆ ಅತ್ಯಂತ ಅಗತ್ಯ.

ಒಂದು ಇಡೀ ಕಾರ್ಯಕ್ರಮದಲ್ಲಿ ಎಲ್ಲ ಮಕ್ಕಳು ಒಳಗೊಳ್ಳುವಂತೆ ಮತ್ತು ಭಾಗವಹಿಸುವಂತೆ ಉತ್ತೇಜನ ನೀಡುವುದು ಪ್ರತಿಯೊಂದು ಮಗುವಿನ ಅಸದೃಶ ಗುಣಗಳು ಹಾಗೂ ಸಾಮರ್ಥ್ಯಗಳು, ಶಕ್ತಿ ಮತ್ತು ಆಸಕ್ತಿಗಳೊಂದಿಗೆ ಕೆಲಸ ಮಾಡುವುದನ್ನು ಒಳಗೊಂಡಿರುತ್ತದೆ.. ಇದರಿಂದ ಪ್ರತಿ ಮಗುವು ತನ್ನ ಪೂರ್ಣ ಸಾಮರ್ಥ್ಯಗಳನ್ನು ತಲುಪಲು ಸಾಧ್ಯವಾಗುತ್ತದೆ. ವಿಶೇಷ ಅಗತ್ಯಗಳನ್ನು ಹೊಂದಿರುವ ಮಕ್ಕಳು ಎಲ್ಲ ಮಕ್ಕಳಂತೆಯೇ ಎಂಬುದನ್ನು ತಿಳಿದುಕೊಳ್ಳಲು ಆರಂಭಿಕ ಬಾಲ್ಯ ಶಿಕ್ಷಣದ ವೃತ್ತಿಪರರು ಬಹಳ ಮುಖ್ಯ. ಎಲ್ಲಿ ಮತ್ತು ಯಾವಾಗ ಸಾಧ್ಯವೋ ಅಲ್ಲಿ ಮಕ್ಕಳಿಗೆ ಒಂದೇ ರೀತಿಯ ನಿರೀಕ್ಷೆಗಳನ್ನು ನಿಗದಿಮಾಡುವುದು ಒಳಗೂಡಿಸಲು ಸಹಾಯವಾಗುತ್ತದೆ. ಒಳಗೊಳ್ಳುವ ಅಭ್ಯಾಸಕ್ರಮದ ಮೇಲೆ ಗಮನವನ್ನು ಕೇಂದ್ರೀಕರಿಸಿದ, ಕಾರ್ಯಸಾಧ್ಯವಾದ ಕಾರ್ಯಕ್ರಮ ವಿಧಾನಗಳು ಮತ್ತು ಪಠ್ಯಕ್ರಮದ ನಿರ್ಧಾರಗಳನ್ನು ಮಾಡುವುದರ ಮೂಲಕ ಎಲ್ಲ ಮಕ್ಕಳ ಉನ್ನತ ನಿರೀಕ್ಷೆಗಳನ್ನು ಪೂರೈಸಲು ಸಾಧ್ಯವಾಗಬಹುದು. ಕೇವಲ ಒಂದು ನಿರ್ದಿಷ್ಟ ಮಗುವಿಗೆ ಪರ್ಯಾಯ ಅಥವಾ ಪ್ರತ್ಯೇಕ ಅನುಭವಗಳನ್ನು ನೀಡುವ ಬಗ್ಗೆ ಯೋಜನೆ ರೂಪಿಸುವುದರ ಬದಲಾಗಿ ಅಸಾಮರ್ಥ್ಯ ಹೊಂದಿರುವ ಮಕ್ಕಳು ಒಳಗೊಳ್ಳುವಂತಹ ಪಠ್ಯಕ್ರಮದ

ನಿರ್ಧಾರ ಕೈಗೊಳ್ಳುವುದು ಎಲ್ಲ ಮಕ್ಕಳು ದಿನನಿತ್ಯದ ಅನುಭವಗಳಲ್ಲಿ ತೊಡಗಿಕೊಳ್ಳಲು ಅವಕಾಶಗಳನ್ನು ಸೃಷ್ಟಿಸಿದಂತಾಗುತ್ತದೆ (ಓವೆನ್ಸ್, 2012). ಪ್ರತಿ ದಿನ ಸಂಭವಿಸುವ ಎಲ್ಲ ಯೋಜಿತ ಹಾಗೂ ಅಯೋಜಿತ "ಅಂತರಕ್ರಿಯೆಗಳು, ಅನುಭವಗಳು, ದಿನಚರಿಗಳು ಮತ್ತು ಘಟನೆಗಳನ್ನು" ಪಠ್ಯಕ್ರಮದಲ್ಲಿ ಒಳಗೊಂಡಿರಬೇಕು (ಎಸಿಇಸಿಕ್ಯೂಎ, 2011, ಪು.203). ಒಳಗೊಳ್ಳುವ ಪಠ್ಯಕ್ರಮದ ನಿರ್ಧಾರವನ್ನು ಕೈಗೊಳ್ಳುವಾಗ ಶಿಕ್ಷಕರು ಅನುಭವಗಳನ್ನು ವಿನ್ಯಾಸಗೊಳಿಸುವ ಮೂಲಕ ಉದ್ದೇಶಪೂರ್ವಕವಾಗಿ ಪ್ರತಿ ಮಗುವಿನ ಕಲಿಕೆಯನ್ನು ವಿಸ್ತರಿಸುತ್ತಾರೆ. ಇಂತಹ ಅನುಭವಗಳು ಮಗುವಿನ "ಯೋಜಿತ ಹಾಗೂ ಅಯೋಜಿತ ಕಲಿಕಾ ಅನುಭವಗಳ ಶಕ್ತಿ, ಆಸಕ್ತಿ ಮತ್ತು ಸಾಮರ್ಥ್ಯಗಳ ಮೇಲೆ ಕಟ್ಟಲಾಗಿರುತ್ತದೆ" (ಓವೆನ್ಸ್, 2012, ಪ.2).

## ಕುಟುಂಬಗಳನ್ನು ಒಳಗೊಳ್ಳುವಂತೆ ಮಾಡುವುದು

ವೈವಿಧ್ಯತೆಯ ಹಿನ್ನೆಲೆಯನ್ನು ಹೊಂದಿರುವ ಮಕ್ಕಳ ಕುಟುಂಬಗಳಿಗೂ ಇತರ ಕುಟುಂಬಗಳಂತೆ ಇಸಿಇಸಿಯ ( ಆರಂಭಿಕ ಶೀಕ್ಷಣ ಮತ್ತು ಆರೈಕೆ) ಅಗತ್ಯಗಳಿರುತ್ತವೆ. ಎಲ್ಲವನ್ನೂ ಒಳಗೊಂಡ ಇಸಿಇಸಿ ಪರಿಸರವು ಸಾಮಾನ್ಯ ಜೀವನ ವಿಧಾನಗಳಲ್ಲಿ ತೊಡಗಿಕೊಳ್ಳಲು ಎಲ್ಲ ಕುಟುಂಬಗಳಿಗೆ ಅವಕಾಶವನ್ನು ನೀಡುತ್ತದೆ (ಜಾನ್ಸನ್ & ಓಲ್ಸನ್, 2006). ಹೀಗೆ ಒಳಗೊಳ್ಳುವ ವ್ಯವಸ್ಥೆಯು ತೊಡಕುಗಳನ್ನು ನಿವಾರಿಸುತ್ತದೆ ಮತ್ತು ಉನ್ನತ ಗುಣಮಟ್ಟದ ಇಸಿಇಸಿಯಲ್ಲಿ ತೊಡಗಿಕೊಳ್ಳಲು ಎಲ್ಲ ಮಕ್ಕಳಿಗೆ ಅವಕಾಶವನ್ನು ಕಲ್ಪಿಸುತ್ತದೆ. ಇದು ಮಕ್ಕಳ ಕಲಿಕೆ ಮತ್ತು ವಿಕಾಸಾತ್ಮಕ ಯಶಸ್ಸನ್ನು ಹೆಚ್ಚಿಸಲು ಸಹಕಾರಿಯಾಗಬಹುದು.

### *ಸ್ಪಷ್ಟ ಮತ್ತು ಪಾರದರ್ಶಕವಾಗಿರಿ*

ಒಳಗೊಳ್ಳುವಿಕೆ ಮತ್ತು ವೈವಿಧ್ಯತೆಯ ಸಿದ್ಧಾಂತದ ಬಗ್ಗೆ ಮೊದಲು ಎಲ್ಲ ಕುಟುಂಬಗಳಿಗೆ ಮಾಹಿತಿ ನೀಡಿ. ಈ ವಿಚಾರದಲ್ಲಿ ಶಿಕ್ಷಕರು ಮತ್ತು ಕುಟುಂಬಗಳಿಗೆ ವಿಭಿನ್ನವಾದ ಅಭಿಪ್ರಾಯಗಳಿದ್ದರೆ ಶಿಕ್ಷಕರು ತಮ್ಮ ಸಹೋದ್ಯೋಗಿಗಳಿಂದ ಬೆಂಬಲವನ್ನು ಪಡೆಯಬಹುದು ಮತ್ತು ಕೇಂದ್ರ ನೀತಿಗಳ ಮಾರ್ಗದರ್ಶನ ಪಡೆಯಬಹುದು. ಎನ್. ಕ್ಯೂ. ಎಫ್ ನ ಸಮಗ್ರ ಮತ್ತು ಒಳಗೊಳ್ಳುವ ವಿಧಾನದ ಮೇಲೆ ಲಕ್ಷ್ಯವಿಡುವುದು ಇಲ್ಲಿ ಸಹಾಯವಾಗಬಹುದು.

### *ನೆಲೆಗೊಳಿಸುವುದಕ್ಕೆ ಗಮನಕೊಡುವುದು*

ಹೊಸ ಇಸಿಇಸಿ ವ್ಯವಸ್ಥೆಯಲ್ಲಿ ನೆಲೆಗೊಳ್ಳುವುದರಲ್ಲಿ ಪ್ರತಿಯೊಂದು ಕುಟುಂಬವೂ ಸವಾಲುಗಳನ್ನು ಎದುರಿಸಬಹುದು. ಯಾಕೆಂದರೆ ಪ್ರತಿ ಮಗುವೂ ಕೂಡ ತನ್ನ ಮನೆಯ ಸಂಸ್ಕೃತಿಯಿಂದ ಸೇವಾ ಸಂಸ್ಕೃತಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ವಿಭಿನ್ನವಾದ ಹಿನ್ನೆಲೆಯಿಂದ ಬಂದವರು, ಅಲ್ಪಸಂಖ್ಯಾತ ಗುಂಪಿಗೆ ಸೇರಿದವರು ಮತ್ತು ಅಸಮರ್ಥತೆಯನ್ನು ಹೊಂದಿರುವ ಮಗು ಮನೆಯಿಂದ ಸಂಸ್ಥೆಗೆ ನಡೆಯುವ ಬದಲಾವಣೆಯಲ್ಲಿ ಇನ್ನೂ ಹೆಚ್ಚಿನ ಸವಾಲುಗಳನ್ನು ಎದುರಿಸಬೇಕಾಗಬಹುದು. ಸಾಮಾನ್ಯವಾಗಿ ಬಹುಜನರ ಮೌಲ್ಯಗಳು ಮತ್ತು ದೃಷ್ಟಿಕೋನಗಳನ್ನು ಆಧರಿಸಿದ ವ್ಯವಸ್ಥೆಯ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿಧಾನಗಳು ಕುಟುಂಬಗಳಿಗೆ ಹೊಸದಾಗಿರಬಹುದು. ಹಾಗಾಗಿ ಇಂತಹ ಕುಟುಂಬಗಳಿಗೆ ನೆಲೆಯೂರುವ ಪ್ರಕ್ರಿಯೆಯು ತಮ್ಮ ಮಕ್ಕಳ ಅಗತ್ಯಗಳನ್ನು ಬೆಂಬಲಿಸುತ್ತವೆ ಮತ್ತು ಸೂಕ್ತವೂ ಅಗಿರುತ್ತದೆ ಎಂಬ ನಂಬಿಕೆ ಬರುವುದು ಬಹುಮುಖ್ಯ.

### *ಕೋರಿಕೊಂಡಾಗ ಕುಟುಂಬಗಳನ್ನು ಬೆಂಬಲಿಸಿ*

ಕುಟುಂಬದ ಬೆಂಬಲ ಮತ್ತು ಅವರ ಮಗುವಿನ ಕಲಿಕೆಯಲ್ಲಿ ಮಾರ್ಗದರ್ಶನ ಹಾಗೂ ಧನಾತ್ಮಕ ಮತ್ತು ಪರಿಣಾಮಕಾರಿ ಮಾರ್ಗಗಳಲ್ಲಿ ಬೆಳವಣಿಗೆ ವಿಚಾರದಲ್ಲಿ ಸಹಾಯ ಮಾಡುವಲ್ಲಿ ಶಿಕ್ಷಕರು ಪ್ರಮುಖ ಪಾತ್ರವನ್ನು

ವಹಿಸಬಹುದು. ಕುಟುಂಬಗಳಿಗೆ ಶಿಕ್ಷಕರಿಂದ ಸಂಪೂರ್ಣ ಬೆಂಬಲ ದೊರೆತಾಗ ಅವರಿಗೂ ಕೂಡ ತಮ್ಮ ಮಕ್ಕಳ ಕಲಿಕೆ ಮತ್ತು ವಿಕಾಸವನ್ನು ಪೋಷಿಸಲು ಹೆಚ್ಚು ಸಿದ್ಧತೆಯಿರುತ್ತದೆ. (ಹಂಟರ್ ಇನ್-ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್, 2014). ಕುಟುಂಬಗಳಿಗೆ ಬೆಂಬಲದ ಅಗತ್ಯವಿರಬಹುದು ಮತ್ತು ಶಿಕ್ಷಕರು ರಿಕಾತ್ಮಕವಾಗಿರದ ರೀತಿಯಲ್ಲಿ ಪ್ರತಿಕ್ರಿಯಿಸಬೇಕಾದ ಅಗತ್ಯವಿರುತ್ತದೆ. ಅನೇಕ ರೀತಿಯ ಸಂವಹನಗಳು ಮತ್ತು ಸಂಬಂಧಗಳಂತೆ, ಇಲ್ಲಿಯೂ ಶಿಕ್ಷಕರು ಕುಟುಂಬದ ಸ್ಥಾನದಲ್ಲಿ ತಮ್ಮನ್ನು ನಿಲಿಸಿಕೊಂಡು, ತಾವು ಈ ಸನ್ನಿವೇಶದಲ್ಲಿ ಹೇಗೆ ಭಾವಿಸುತ್ತಿದ್ದೆವು ಎಂದು ಯೋಚಿಸುವುದು ಸಹಾಯವಾಗುತ್ತದೆ. ಮಗುವಿನ ಕಲಿಕೆ ಮತ್ತು ವಿಕಾಸದ ಎಲ್ಲ ಅಂಶಗಳ ಬಗ್ಗೆ ಗೌರವಯುತವಾದ ಸಂವಹನವನ್ನು ಒಳಗೊಂಡ ಸಮನ್ವಯಕಾರಿ ಸಹಭಾಗಿತ್ವವನ್ನು ಬೆಳೆಸಿಕೊಳ್ಳುವುದು ಎರಡೂ ಪಕ್ಷಕ್ಕೂ ಸಮಗ್ರ ಹಾಗೂ ನಿರಂತರ ವಿಧಾನವನ್ನು ಅಳವಡಿಸಿಕೊಳ್ಳುವ ದೃಷ್ಟಿಯಿಂದ ಸಹಾಯವಾಗುತ್ತದೆ. ವೃತ್ತಿಪರವಾದ ನಿಲುವನ್ನು ತಳೆಯುವುದರಿಂದ ಶಿಕ್ಷಕರು ಕುಟುಂಬಗಳ ಕಡೆಗೆ ಧನಾತ್ಮಕ ಅಭಿವೃತ್ತಿಯನ್ನು ಹೊಂದಲು ಹಾಗೂ ಸಮಸ್ಯೆಗಳನ್ನು ಪರಿಹರಿಸಲು ಬೇಕಾದ ಆಯ್ಕೆಗಳನ್ನು ಗುರುತಿಸಲು ಒಟ್ಟಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ.

ಕುಟುಂಬಕ್ಕೆ ಮಗುವಿನ ಶಕ್ತಿ ಮತ್ತು ಮಾನಸಿಕ ಹಾಗೂ ಸಾಮಾಜಿಕ, ಭಾವನಾತ್ಮಕ ಬೆಳವಣಿಗೆಯೂ ಸೇರಿದಂತೆ ಅದರ ಕಲಿಕೆ ಮತ್ತು ವಿಕಾಸದ ಬಗ್ಗೆ ಕುಟುಂಬಕ್ಕೆ ವೃತ್ತಿಪರ ಸಲಹೆಯನ್ನು ನೀಡುವುದು ಬಹಳ ಮುಖ್ಯ. ತಮಗೆ ಬಂದ ಮಾಹಿತಿಯ ಆಧಾರದಲ್ಲಿ ಮುಂದುವರಿಯಲು ನಿಜಕ್ಕೂ ಯಾರ ಸಹಾಯವನ್ನು ಪಡೆಯಬೇಕು ಎಂಬುದು ಕುಟುಂಬಗಳಿಗೆ ಯಾವತ್ತೂ ತಿಳಿದಿರುವುದಿಲ್ಲ. ಕುಟುಂಬಗಳಿಗೆ ಅವರ ಸ್ಥಳೀಯ ಸಮುದಾಯದಲ್ಲಿ ಮತ್ತು ಅದರಿಂದ ಆಚೆಗೆ ವಿಶ್ವಾಸಾರ್ಹವಾದ ಮಾಹಿತಿಗಳ ಮೂಲವನ್ನು ಶಿಫಾರಸು ಮಾಡುವುದು ಮತ್ತು ಕುಟುಂಬಗಳನ್ನು ಬೆಂಬಲಿಸುವುದು ಅತ್ಯಂತ ಮುಖ್ಯ. ಅಗತ್ಯವಿರುವ ಕುಟುಂಬಗಳು ಮತ್ತು ಸಹಾಯ ಮಾಡಲೆಂದು ನೇಮಕವಾಗಿರುವ ಸಂಸ್ಥೆಗಳ ನಡುವೆ ಸೇತುವೆಯಾಗಿ ಆರಂಭಿಕ ಬಾಲ್ಯ ಶಿಕ್ಷಣದ ಶಿಕ್ಷಕರು ಕೆಲಸ ಮಾಡುತ್ತಾರೆ. ಇಸಿಇಸಿ ವ್ಯವಸ್ಥೆಯೊಂದಿಗೆ ಜಂಟಿಯಾಗಿರುವ ಸಮುದಾಯದ ಗುಂಪಿಗಳಲ್ಲಿ ಲಭ್ಯವಿರುವ ಅನೇಕ ರೀತಿಯ ಸಹಾಯದ ವ್ಯವಸ್ಥೆಗಳ ಬಗ್ಗೆ ಶಿಕ್ಷಕರು ಪೂರ್ಣ ಜ್ಞಾನವನ್ನು ಹೊಂದಿರುವುದು ಕುಟುಂಬಗಳಿಗೆ ಸಹಾಯಹಸ್ತ ಚಾಚಲು ಅನುಕೂಲ.

*ಚಿತ್ರ 4.8: ತಾಯಿ-ಮಗು ಸಿಬ್ಬಂದಿಯೊಂದಿಗೆ. (2018). ಆಸ್ಟ್ರೇಲಿಯಾ, USQ ಸಂಗ್ರಹ ಚಿತ್ರ.*



## *ಕುಟುಂಬಗಳೊಂದಿಗೆ ಸಂವಹನ*

ಶಿಕ್ಷಕರು ಮಕ್ಕಳ ಕಲಿಕೆಯ ಅಗತ್ಯಗಳನ್ನು ಗುರುತಿಸುವುದು ಮತ್ತು ಅವರು ಹೊಂದಿರಬಹುದಾದ ಯಾವುದೇ ಕಳಕಳಿಗಳಿಗೆ ತಕ್ಷಣ ಪ್ರತಿಕ್ರಿಯಿಸುವುದು ಮುಖ್ಯ. ಮಗುವಿಗೆ ಸಂಬಂಧಿಸಿದ ಕಳಕಳಿಗಳನ್ನು ಪಾಲಕರಿಗೆ ತಿಳಿಸುವುದು ಕೆಲವೊಮ್ಮೆ ಕಷ್ಟದ ಕೆಲಸ. ಈಗಾಗಲೇ ನಂಬಿಕೆ ಮತ್ತು ಗೌರವದ ಮೇಲೆ ರಚಿಸಲಾಗಿರುವ ಸಂಬಂಧಗಳಾಗಿದ್ದರೆ ಈ ಕೆಲಸದಿಂದ ಯಶಸ್ಸು ಸಾಧ್ಯ. ಇಂತಹ ಸಂಬಂಧ ಇದ್ದಾಗ್ಯೂ ಮಗುವಿನ ಬಗ್ಗೆ ಏನನ್ನು

ಹೇಳಬೇಕು ಎನ್ನುವ ಕುರಿತು ಸರಿಯಾದ ಯೋಜನೆಯನ್ನು ಮಾಡಬೇಕು. ಇದಕ್ಕೆ ಸಂಬಂಧಿಸಿದ ಚರ್ಚೆಯು ಒಂದು ಖಾಸಗಿ ಸ್ಥಳದಲ್ಲಿ ನಡೆಯಬೇಕು ಮತ್ತು ಸಾಕಷ್ಟು ಸಮಯವನ್ನು ನೀಡಬೇಕು. ಸಾಧ್ಯವಾದರೆ ಮಗುವಿನ ಅಪ್ಪ-ಅಮ್ಮ ಇಬ್ಬರೂ ಇರುವಂತೆ ನೋಡಿಕೊಳ್ಳಬಹುದು.

ಮೊದಲ ಹಂತವಾಗಿ ಅವರ ಮಗು ಹೇಗಿದೆ ಎಂದು ಕುಟುಂಬದ ಸದಸ್ಯರನ್ನು ಕೇಳಬೇಕು. ಬಳಿಕ ಇಸಿಇಸಿ ವ್ಯವಸ್ಥೆಯಲ್ಲಿ ಮಗುವಿನ ಧನಾತ್ಮಕ ಗುಣಗಳನ್ನು ಅವರೊಂದಿಗೆ ಹಂಚಿಕೊಳ್ಳುವುದು. ಮೊದಲಿಗೆ ಕುಟುಂಬವು ಈ ಕೆಳಗಿನ ಸಂಗತಿಗಳನ್ನು ತಿಳಿದಿರುವಂತೆ ಶಿಕ್ಷಕರು ನೋಡಿಕೊಂಡರೆ ಹೆಚ್ಚು ಸಹಕಾರಿ:

- ಮಗುವಿನ ಬಗ್ಗೆ ಇರುವ ಕಳಕಳಿಯನ್ನು ಶಿಕ್ಷಕರು ಹಂಚಿಕೊಳ್ಳುವುದು.
- ಮಗುವಿನ ವಿಕಾಸವನ್ನು ಬೆಂಬಲಿಸುವ ಉದ್ದೇಶ ಹೊಂದಿರುವುದಾಗಿ ತಿಳಿಸುವುದು.

ಇವೆಲ್ಲವನ್ನೂ ಮಾಡಲು ಮಗುವಿನ ಅಗತ್ಯಗಳನ್ನು ಪೂರೈಸಲು ಏನೆಲ್ಲ ಮಾಡಬಹುದು ಎನ್ನುವ ಬಗ್ಗೆ ಶಿಕ್ಷಕರಿಗೆ ಅರಿವಿರಬೇಕು. ಮಗುವಿನ ಬಗ್ಗೆ ಕುಟುಂಬದ ಸದಸ್ಯರಿಗೆ ಭಿನ್ನ ಅಭಿಪ್ರಾಯವಿದ್ದರೆ ಅವರ ದೃಷ್ಟಿಕೋನಗಳ ಬಗ್ಗೆ ಮುಕ್ತ ಮನಸ್ಸನ್ನು ಹೊಂದುವುದು, ಪ್ರಶ್ನೆಗಳನ್ನು ಕೇಳುವ ಮೂಲಕ ಮಾಹಿತಿಗಳನ್ನು ಕಲೆಹಾಕುವುದು ಹಾಗೂ ಅವರ ಮಗುವಿನ ಅಗತ್ಯಗಳನ್ನು ಪೂರೈಸುವಲ್ಲಿ ಅವರನ್ನು ನಿಮ್ಮ ಸಹಭಾಗಿಗಳಾಗಿ ಮಾಡಿಕೊಳ್ಳುವುದು. ಇವೆಲ್ಲವನ್ನೂ ಗೌರವಯುತವಾಗಿ ಮಾಡಿದಾಗ ಈ ಸಂವಹನವು ಯೋಚನೆಗಳ ಫಲಪ್ರದ ವಿನಿಮಯಕ್ಕೆ ದಾರಿಯಾಗುತ್ತದೆ ಮತ್ತು ಅಂತಿಮವಾಗಿ ಮಗುವಿಗೆ ಸಹಾಯವಾಗುತ್ತದೆ. ಇಸಿಇಸಿ ವ್ಯವಸ್ಥೆಯಲ್ಲಿ ಪಾಲಕರೊಂದಿಗೆ ಪರಿಣಾಮಕಾರಿಯಾಗಿ ಸಂವಹನ ನಡೆಸಲು ಈ ಕೆಳಗಿನ ದಾಖಲೆಗಳು ಕಾರ್ಯಸಾಧ್ಯವಾದ ಹೊಳವನ್ನು ಒದಗಿಸುತ್ತದೆ. ಮಾಹಿತಿಯ ಶೀಟ್ ಪಡೆಯಲು ಈ ಕೆಳಗಿನ ಲಿಂಕ್ ಕ್ಲಿಕ್ ಮಾಡಿ: Kids Matter– Effective Communication between families and staff members

## *ಬಹುನಿಯೋಗಗಳನ್ನು ಒಳಗೂಡಿಸಲು ಸಂಧಾನಮಾಡುವುದು*

ಆರಂಭಿಕ ಬಾಲ್ಯ ಶಿಕ್ಷಣದ ಕಾರ್ಯಕ್ರಮದಲ್ಲಿ ಇರುವಾಗಲೇ ವಿಶೇಷ ಅಗತ್ಯಗಳನ್ನು ಹೊಂದಿರುವ ಮಕ್ಕಳಿಗೆ ತಜ್ಞರಿಂದ ಹೆಚ್ಚುವರಿ ಚಿಕಿತ್ಸೆ ಸಿಗಬಹುದು. ಆರಂಭಿಕ ಬಾಲ್ಯ ವೃತಿಪರರು  ಮಗುವಿಗೆ ಆಧಾರಸೇವೆಗಳನ್ನು ಒದಗಿಸುವಲ್ಲಿ ಕುಟುಂಬ ಮತ್ತು ಇತರ ವೃತ್ತಿಪರರೊಂದಿಗೆ ಸಹಭಾಗಿತ್ವವನ್ನು ಸಾಧಿಸುವುದು ಬಹುಮುಖ್ಯ. ತಜ್ಞ ಬೆಂಬಲವನ್ನು ಒದಗಿಸುವವರ ಜೊತೆ ಸಂಪರ್ಕವನ್ನು ಹೊಂದುವುದು ಮಗುವಿನ ಚಟುವಟಿಕೆಗಳ ಜೊತೆ ಸಮನ್ವಯ ಸಾಧಿಸಲು ನೆರವಾಗುತ್ತದೆ. ತಮ್ಮ ಮಕ್ಕಳನ್ನು ಬೆಂಬಲಿಸಲು ಪಾಲಕರ ಜೊತೆ ಕೆಲಸ ಮಾಡುವಲ್ಲಿ ಶಿಕ್ಷಕರ ಪಾತ್ರ ದೊಡ್ಡದು.

ಶಿಕ್ಷಕರು, ಕುಟುಂಬಗಳು, ವೃತ್ತಿಪರರು, ಸಂಸ್ಥೆಗಳು ಮತ್ತು ಸಮುದಾಯದ ಸದಸ್ಯರು ಯಶಸ್ವಿಯಾಗಿ ತೊಡಗಿಕೊಳ್ಳುವುದು ಮಾಹಿತಿಯನ್ನು ಹಂಚಿಕೊಳ್ಳಲು ಸಹಾಯ ಮಾಡಿ, ಅಂತಿಮವಾಗಿ ಮಕ್ಕಳ ಕಲಿಕೆ ಮತ್ತು ವಿಕಾಸವನ್ನು ಬಲಪಡಿಸುತ್ತದೆ. ಇವರ ನಡುವೆ ಬಲವಾದ ಸಹಭಾಗಿತ್ವ ಅಪಾಯದಲ್ಲಿರುವ (ವೇಧನೀಯ) ಮಕ್ಕಳಲ್ಲಿ ಹೆಚ್ಚು ಸುರಕ್ಷತೆಯ ಭಾವನೆಗೆ ಸಹಾಯಮಾಡುತ್ತದೆ.(ಹಂಟರ್ ಇನ್-ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್, 2014). ಕುಟುಂಬಗಳು, ವೃತ್ತಿಪರರು ಮತ್ತು ಸಂಸ್ಥೆಗಳ ಜೊತೆಗೆ ಕೆಲಸ ಮಾಡುವುದು ಶಿಕ್ಷಕರಿಗೆ ಉಪಯುಕ್ತವಾದ ಮಾಹಿತಿಗಳನ್ನು ಪಡೆಯಲು ಮತ್ತು ಕಾರ್ಯತಂತ್ರಗಳನ್ನು ರೂಪಿಸಲು ಸಹಕಾರಿ. ಇದರಿಂದ ಮಕ್ಕಳ ಕಲಿಕೆ ಮತ್ತು ವಿಕಾಸಕ್ಕೆ ಸರಿಯಾದ ಮಾರ್ಗದರ್ಶನ ನೀಡಲು ಸಾಧ್ಯವಾಗುತ್ತದೆ.

## ಮಕ್ಕಳ ಸಬಲೀಕರಣ

ಕುಟುಂಬಗಳು ಮತ್ತು ಇತರ ವೃತ್ತಿಪರರ ಜೊತೆ ಕೆಲಸ ಮಾಡುವ ಮತ್ತು ಚಿಂತನಾರ್ಹವಾದ ಹಾಗೂ ಮಾಹಿತಿಪೂರ್ಣ ಪಠ್ಯಕ್ರಮದ ನಿರ್ಧಾರಗಳನ್ನು ಕೈಗೊಳ್ಳುವ ಶಿಕ್ಷಕರು ಮಕ್ಕಳಿಗೆ ಯಶಸ್ಸಿನ ಅತ್ಯುತ್ತಮ ಅವಕಾಶಗಳನ್ನು ಕೊಡಬಲ್ಲರು. ಪರಿಗಣಿಸಲಾದ ಪಠ್ಯಕ್ರಮ ಮತ್ತು ಕಾರ್ಯಕ್ರಮದ ವಿನ್ಯಾಸದ ಮೂಲಕ ಮಕ್ಕಳ ಕತೃತ್ವಶಕ್ತಿಯನ್ನು ಬಲಪಡಿಸುವುದು ಮಕ್ಕಳನ್ನು ತಮ್ಮದೇ ಕಲಿಕೆ ಮತ್ತು ವಿಕಾಸದಲ್ಲಿ ವಿಶ್ವಾಸದಿಂದ ತೊಡಗಿಕೊಳ್ಳಲು ಶಕ್ತರನ್ನಾಗಿಮಾಡುತ್ತದೆ. ಉದ್ದೇಶಪೂರ್ವಕವಾಗಿ ಅನುಭವಗಳನ್ನು ಯೋಜಿಸುವುದು ಹಾಗೂ ಪೋಷಣೆಯಲ್ಲಿ ತೊಡಗುವ ಹಾಗೂ ಮಕ್ಕಳೊಂದಿಗೆ ಅನಿರ್ದೇಶಿತ ಅಂತರಕ್ರಿಯೆಗಳ ಮೂಲಕ ಸಿಬ್ಬಂದಿಯು ಮಕ್ಕಳ ಕಲಿಕೆಯ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬಹುದು. ಮಕ್ಕಳ ಕತೃತ್ವಶಕ್ತಿಯನ್ನು ಬೆಂಬಲಿಸುವುದು ಅವರು ಆಯ್ಕೆಗಳು ಮತ್ತು ನಿರ್ಧಾರಗಳನ್ನು ಕೈಗೊಳ್ಳಲು ಸಶಕ್ತರನ್ನಾಗಿ ಮಾಡುತ್ತದೆ ಹಾಗೂ ಘಟನೆಗಳು ಮತ್ತು ತಮ್ಮ ಜಗತ್ತನ್ನು ಪ್ರಭಾವಿಸುವಂತೆ ಮಾಡಬಹುದು. ಸಮರ್ಪಕವಾದ ಆಯ್ಕೆಗಳನ್ನು ಮಾಡಿಕೊಳ್ಳುವುದರಿಂದ ಮಕ್ಕಳು ತಮ್ಮ ಕೌಶಲಗಳನ್ನು ಜಾರಿಗೆ ತರಲು ಅವಕಾಶ ಸಿಗುತ್ತದೆ ಮತ್ತು ಅಸ್ತಿತ್ವದ ಬಗ್ಗೆ ಬಲವಾದ ಪ್ರಜ್ಞೆ ಬೆಳೆಯುತ್ತದೆ. ಇದಕ್ಕೆ ಒಂದು ಪ್ರಾಯೋಗಿಕವಾದ ಕಾರ್ಯತಂತ್ರವೆಂದರೆ, ಪ್ರತಿಯೊಂದು ಮಗುವಿಗೂ ಇತರರೊಡನೆ ಕೆಲಸ ಮಾಡಲು, ಕಲಿಯಲು ಮತ್ತು ಸಮನ್ವಯ ಕಲಿಕಾ ಅವಕಾಶಗಳ ಮೂಲಕ ಇತರರಿಗೆ ಸಹಾಯ ಮಾಡಲು ಬೇಕಾಗುವ ಕಾರ್ಯತಂತ್ರಗಳು, ಅಭ್ಯಾಸಕ್ರಮಗಳು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

ಮನೆ ಮತ್ತು (ಇ.ಸಿ.ಇ) ಸನ್ನಿವೇಶಗಳೆರಡರಲ್ಲೂ ಮಕ್ಕಳನ್ನು, ಒಂದು ನಿರ್ದಿಷ್ಟದಿನದಲ್ಲಿ ಒಂದು ಗುಂಪಿನ ಭಾಗವಾಗಿ ಹೇಗೆ ನಿಭಾಯಿಸಿಕೊಳ್ಳುತ್ತಾರೆ ಎನ್ನುವುದನ್ನು ಪ್ರಭಾವಿಸುವ ವಿವಿಧ ಕೌಶಲ್ಯಗಳು, ಸಂವೇಗಗಳು ಮತ್ತು ಅನುಭವಗಳುಳ್ಳ ವ್ಯಕ್ತಿಗಳು ಎಂದು ಮಾನ್ಯ ಮಾಡುವುದು ಮುಖ್ಯ. ಸಿಬ್ಬಂದಿ ಹೆಚ್ಚು ಸ್ಪಂದನಾಶೀಲರಾಗಿದ್ದು ಮಕ್ಕಳ ದಿನನಿತ್ಯದ ಅನುಭವಗಳಲ್ಲಿ ಹೊರಬೀಳುವ ಸ್ವಾಭಾವಿಕ ಕೌಶಲ್ಯಕಲಿಕಾ ಅವಕಾಶಗಳನ್ನು ಉತ್ತಮಗೊಳಿಸಿದಾಗ ಮಕ್ಕಳ ಕಲಿಕೆ ಬಹಳಷ್ಟು ಪರಿಣಾಮಕಾರಿಯಾಗಿರುತ್ತದೆ. ಮಕ್ಕಳು ತಮ್ಮದೇ ವರ್ತನೆಯನ್ನು ನಿರ್ದೇಶಿಸುವುದನ್ನು ಕಲಿಯಲು ನಿರೀಕ್ಷೆಗಳು ಮತ್ತು ಯಾವುದು ಸಮ್ಮತಾರ್ಹ ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಹಾಯ ಬೇಕಾಗುತ್ತದೆ. ಉದಾಹರಣೆಗೆ, ಹೊಸ ಸಾಧನಗಳನ್ನು ಬಳಸಲು ಯಾಕೆ ಕಾಯಬೇಕು, ಗೋಡೆಗಳ ಮೇಲೆ ಯಾಕೆ ಬರೆಯಬಾರದು, ಇನ್ನೊಬ್ಬರ ತಲೆಗೂದಲನ್ನು ಹಿಡಿದೆಳೆದು ಅವರು ಮುಂದೆ ಹೋಗುವಂತೆ ಮಾಡುವುದು ಯಾಕೆ ಸರಿಯಲ್ಲ ಎಂಬುದು ಅವರಿಗೆ ಅರ್ಥವಾಗದೇ ಇರಬಹುದು. ಈ ಪ್ರಶ್ನೆಗಳಿಗೆ ದೊರೆಯುವ ಉತ್ತರಗಳು ಮಕ್ಕಳಿಗೆ ಯಾವಾಗಲೂ ಸ್ಪಷ್ಟವಾಗಿರುವುದಿಲ್ಲ. ಮಕ್ಕಳ ತಿಳುವಳಿಕೆಯನ್ನು ಮಾನ್ಯ ಮಾಡುವ ಮೂಲಕ ಅವರನ್ನು ಸಶಕ್ತಗೊಳಿಸಬೇಕು ಮತ್ತು ಅವರು ಹೊಸ ಜ್ಞಾನವನ್ನು ಬೆಳೆಸಿಕೊಂಡಾಗ ಬೆಂಬಲಿಸಬೇಕು

## ಅಂತರ್ವೇಶನ ಶಿಕ್ಷಣ ಮತ್ತು ವೈವಿಧ್ಯತೆಗೆ ಸಾಧನವಾಗಿ ಆಟವನ್ನು ಆಧರಿಸಿದ ಬೋಧನಾಶಾಸ್ತ್ರ

ವಿವಿಧ ರೀತಿಯ ಅಗತ್ಯಗಳು, ಹಿನ್ನೆಲೆ, ಸಾಮರ್ಥ್ಯಗಳು, ಲಿಂಗತ್ವ, ಸಂಸ್ಕೃತಿ, ಭಾಷೆ ಮತ್ತು ಆಸಕ್ತಿಗಳನ್ನುಳ್ಳ ಮಕ್ಕಳಿಗೆ ಇಸಿಇಸಿ ವ್ಯವಸ್ಥೆ ಸೇವೆ ನೀಡುತ್ತದೆ. ಆಟವನ್ನು ಆಧರಿಸಿದ ಕಲಿಕಾ ಅನುಭವಗಳು ಆರಂಭಿಕ ಶಿಕ್ಷಣದ ಹೃದಯವಾಗಿದೆ (ಬೂತ್, ಐನ್-ಸ್ಕಾವ್ & ಕಿಂಗ್-ಸ್ಟನ್, 2006). ಮಕ್ಕಳು ಆಟದ ಮೂಲಕ ಪ್ರಪಂಚವನ್ನು ಅರ್ಥೈಸಿಕೊಳ್ಳುತ್ತಾರೆ ಮತ್ತು ಅವರು ಆಟವಾಡುವಾಗ ತಮ್ಮ ಸಮವಯಸ್ಕರ ಸಾಮಾಜಿಕ ಜಗತ್ತಿನಲ್ಲಿ ತೊಡಗಿಕೊಳ್ಳುತ್ತಾರೆ. ನಿರ್ಧಾರಗಳನ್ನು ಕೈಗೊಳ್ಳಲು, ಮುನ್ಸೂಚನೆಗಳಿಗೆ ಮತ್ತು ಸಮಸ್ಯಾ ಪರಿಹಾರಕ್ಕೆ ಆಟಗಳು ಒದಗಿಸುವ ಅವಕಾಶಗಳಿಂದ ಅವರು ಲಾಭ ಪಡೆಯುತ್ತಾರೆ., ಮಕ್ಕಳನ್ನು ಆಟದಲ್ಲಿ ಬೆಂಬಲಿಸಿದಾಗ ಅವರ ವೈಯುಕ್ತಿಕ ಬೆಳವಣಿಗೆ, ದೈಹಿಕ, ಸಂವೇಗಾತ್ಮಕ ಮತ್ತು ಸಂಜ್ಞಾನಾತ್ಮಕ ವಿಕಾಸಕ್ಕೆ ಮೂಲಭೂತವಾದ ಕೌಶಲ್ಯಗಳು ಮತ್ತು ಫಲದಾಯಕ ಸಂಬಂಧಗಳನ್ನು ಬೆಳೆಸುವ ಅನುಭಗಳನ್ನು ಸೃಷ್ಟಿಸಲು ಇತರರೊಡನೆ

ಸಕ್ರಿಯವಾಗಿ ಅಂತರಕ್ರಿಯೆ ನಡೆಸುತ್ತಾರೆ (ಕಿಡ್ಸ್ ಮ್ಯಾಟರ್, ಎನ್.ಡಿ). ಅವರು ತಮ್ಮ ಜಗತ್ತಿನೊಡನೆ ಮತ್ತು ಅಲ್ಲಿರುವ ಜನರ ಜೊತೆ ಅಂತರಕ್ರಿಯೆಯ ಮೂಲಕ ತಮಗಾಗಿ ಮೌಲ್ಯಯುತವಾದ ಕಲಿಕಾ ಅವಕಾಶಗಳನ್ನು ಸೃಷ್ಟಿಸುತ್ತಾರೆ (ಸೀರಜ್-ಬ್ಲಾಚ್-ಫೋರ್ಡ್ ಮತ್ತು ಸೈಲ್ವಾ, 2004). ಮಕ್ಕಳು ತಮ್ಮ ಸಾಮಾಜಿಕ ಮತ್ತು ಸಂವೇಗಾತ್ಮಕ ಕೌಶಲಗಳು ಮತ್ತು ತಿಳುವಳಿಕೆಗಳನ್ನು ಆಟ ಮತ್ತು ತಮ್ಮ ಸಮವಯಸ್ಕರ ಜೊತೆ ಅಂತರಕ್ರಿಯೆಯ ಮೂಲಕ ಹೊಸ ಪರಿಸ್ಥಿತಿಗಳಿಗೆ ವರ್ಗಾವಣೆ ಮಾಡಲು ಕಲಿಯುತ್ತಾರೆ

ಶಿಪ್ಲೆ (2013) ಆಟದ ಮೂಲಕ ಯಾವಾಗ ಕಲಿಕೆ ಸಾಧ್ಯವಾಗುತ್ತದೆ ಎಂಬುದಕ್ಕೆ ಕೆಳಗಿನ ನಿಯಮಗಳನ್ನು ಸೂಚಿಸುತ್ತಾರೆ. ಆಟ-

- ಸಂವೇದನೆಗಳನ್ನು ತೊಡಗಿಸಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ನೀಡಿದಾಗ
- ಅನ್ವೇಷಣೆ ಮತ್ತು ಪ್ರಯೋಗಗಳ ಮೂಲಕ ಮುಕ್ತವಾಗಿ ಓಡಾಡಿಕೊಂಡು ತಮ್ಮ ವೈಯಕ್ತಿಕ ವಿಕಾಸದ ಮಟ್ಟದಲ್ಲಿ ಸ್ವಯಂ-ಗತಿಯ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾದಾಗ
- ಸರಸಮಯ ಕಲಿಕಾ ಪರಿಸರದಲ್ಲಿ ನೈಜ ವಸ್ತುಗಳೊಂದಿಗೆ ಆಡಲು ಪ್ರತಿಕ್ರಿಯಿಸಲು ಸಾಧ್ಯವಾದಾಗ
- ತಾವು ಕಲಿಯುತ್ತಿರುವುದರಲ್ಲಿ ಆಸಕ್ತಿಯಿದ್ದು ತಮ್ಮದೇ ರೀತಿಯಲ್ಲಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಇದ್ದಾಗ ಆಟ ಬಹಳ ಪರಿಣಾಮಕಾರಿಯಾಗುತ್ತದೆ
- ಮಾನಸಿಕವಾಗಿ ಸುರಕ್ಷಿತತೆಯನ್ನು ಅನುಭವಿಸುವ, ಅಪಾಯವನ್ನು ಎದುರುಗೊಳ್ಳುವ ಮತ್ತು ತಪ್ಪು ಮಾಡುವುದನ್ನು ಒಪ್ಪಿಕೊಳ್ಳುವ ಸ್ಥಳದಲ್ಲಿ ಮತ್ತು ಕಲಿಕೆಯ ಗತಿಗೆ ಸಹಾಯಕವಾಗಬಲ್ಲ ರೀತಿಯಲ್ಲಿ ಸಕಾಲದಲ್ಲಿ ಉತ್ತೇಜನವನ್ನು ನೀಡುವ ವಾತಾವರಣದಲ್ಲಿ.
- ಮುಕ್ತ ಪರಿಶೋಧನಾತ್ಮಕ ಆಟದ ಮೂಲಕ ಪರಿಕಲ್ಪನೆಗಳನ್ನು ಅನಾವರಣ ಮಾಡುವ ಮೂಲಕ.
- ಅತ್ಯಂತ ಪರಿಣಾಮಕಾರಿಯಾಗಿರುವುದು ಅವರು ಜ್ಞಾನ, ಕೌಶಲ ಮತ್ತು ತಿಳುವಳಿಕೆಯ ಸರಳ ಮತ್ತು ಮೂರ್ತ ಮಟ್ಟದಿಂದ  ಹೆಚ್ಚು ಸಂಕೀರ್ಣ ಅಮೂರ್ತ ಪರಿಕಲ್ಪನೆಗಳ ಕಡೆಗೆ ಪ್ರಗತಿಯನ್ನು ಸಾಧಿಸಿ ಸಾಮಾನ್ಯ ಸಂಕಲ್ಪನೆಗಳ ಮೂಲಕ ನಿರ್ದಿಷ್ಟ ಸಂಕಲ್ಪನೆಗಳನ್ನು ಅರ್ಥಮಾಡಿಕೊಂಡಾಗ.
- ಈ ಹಿಂದೆ ಗಳಿಸಿದ ಜ್ಞಾನ, ಈ ಹಿಂದೆ ಪಡೆದುಕೊಂಡ ಕೌಶಲಗಳನ್ನು ಪುನರಾವಲೋಕನ ಮಾಡಿಕೊಂಡು ಈಗಾಗಲೇ ತಿಳಿದ ಸಂಗತಿಯಿಂದ ಹೊಸ ಸಂಗತಿಗೆ ಅನ್ವಯಿಸುವಂತೆ ಜ್ಞಾನವನ್ನು ವರ್ಗಾವಣೆ ಮಾಡಿದಾಗ

  ಅತ್ಯಂತ ಪರಿಣಾಮಕಾರಿಯಾಗುವುದು ಯಾವಾಗ ಎಂದರೆ, ಈಗ ತಿಳಿದಿರುವುದರ ಮೇಲೆ  ಅವರ ಆಟದ ಅನುಭವಗಳು ರೂಪಿತವಾಗಿದ್ದು ವ್ಯಕ್ತಿಗೆ ಸೂಕ್ತವಾದ ಸಹಾಯಕಗಳಿಂದ** ಸಾಮಿಪ್ಯ ವಿಕಾಸದ ವಲಯ ಎಂದು ಕರೆಯಲ್ಪಡುವುದಕ್ಕೆ ಇನ್ನೂ ಒಂದು ಹೆಜ್ಜೆ ಮುಂದೆ ಹೋದಾಗ.

( **scaffolded . ಶಿಶು ಸಂಜ್ಞಾನಾತ್ಮಕ ವಿಕಾಸದಲ್ಲಿ ಈ ಸಂಕಲ್ಪನೆ ಬರುತ್ತದೆ. ಒಂದು ಮಗು ಕಲಿಯುವಾಗ ಅದರ ಸುತ್ತಲಿರುವ ಜನರು ಮಗುವಿಗೆ ಕಲಿಸಲು ( ಅಟ್ಟಣಿಗೆಯ ಸಹಾಯದಿಂದ ಕಟ್ಟಡದ ಎತ್ತರ ಹೆಚ್ಚಿಸುವ ಹಾಗೆ) ಮಗುವಿನ ವಿಕಾಸದ ಮಟ್ಟಕ್ಕೆ ಸೂಕ್ತವಾಗಿ, ಅದು ತಿಳಿದಿರುವುಕ್ಕಿಂತ ಸ್ವಲ್ಪ ಹೆಚ್ಚಿನ ಮಟ್ಟದ ಮಾಹಿತಿ ನೀಡುತ್ತಾ ಸಹಾಯ ಮಾಡುತ್ತಾರೆ. ಇದನ್ನು scaffolding ಎನ್ನುತ್ತಾರೆ. Suffocating ಅಲ್ಲ,)

*ಚಿತ್ರ4.9: ಸ್ಪೈರಲ್ ಬುಕ್ ಜೊತೆ ಇರುವ ಮಗು. (2018). ಆಸ್ಟ್ರೇಲಿಯಾ, USQ ಸಂಗ್ರಹ ಚಿತ್ರ*



.

ಆಟವನ್ನು ಆಧರಿಸಿದ ಅಧ್ಯಾಪನಶಾಸ್ತ್ರವು, ಎಲ್ಲಾ ಮಕ್ಕಳ ಆಸಕ್ತಿಗಳು, ಒಳನೋಟಗಳು ಮತ್ತು ಹಿನ್ನೆಲೆಗಳನ್ನು ಅಳವಡಿಸಿಕೊಳ್ಳುವುದರಿಂದ ವೈವಿಧ್ಯತೆ ಮತ್ತು ಒಳಗೊಳ್ಳುವ ಶಿಕ್ಷಣಕ್ಕೆ ಅತ್ಯಂತ ಸೂಕ್ತವಾಗಿದೆ. (ಸೀರಜ್ ಬ್ಲಾಚ್-ಫೋರ್ಡ್ ಮತ್ತು ಸೈಲವಾ, 2004). ಆಟವನ್ನು ಆಧರಿಸಿದ ಅಧ್ಯಾಪನಶಾಸ್ತ್ರವನ್ನು ಆಯ್ಕೆ ಮಾಡಿಕೊಳ್ಳುವ ಶಿಕ್ಷಕರು ಮಕ್ಕಳ ವೈಯಕ್ತಿಕ ಶಕ್ತಿ ಮತ್ತು ಅಗತ್ಯಗಳಿಗೆ ಸ್ಪಂದನಾಶೀಲರಾಗಿದ್ದು ಇದು ಸಹಜವಾಗಿಯೇ ಒಳಗೊಳ್ಳುವ ಪರಿಸರಕ್ಕೆ ದಾರಿಯಾಗುತ್ತದೆ (ಮ್ಯಾಕ್ಲೀನ್, 2016). ಈ ಆಟವನ್ನು ಆಧರಿಸಿದ ಕಲಿಕಾ ಪರಿಸರದಲ್ಲಿ ವೈಯಕ್ತಿಕ ಅಭಿವೃದ್ಧಿ, ಆಸಕ್ತಿಗಳು, ಶಕ್ತಿ ಮತ್ತು ಅಗತ್ಯಗಳ ಆಧಾರದಮೇಲೆ ಎಲ್ಲ ವಿದ್ಯಾರ್ಥಿಗಳಿಗೆ ಭರಪೂರ ಕಲಿಕಾ ಅನುಭವಗಳನ್ನು ಪ್ರೋತ್ಸಾಹಿಸಲು ಬೇಕಾದ ಪರಿಸರ ಮತ್ತು ಸಂಪನ್ಮೂಲಗಳನ್ನು ಆಗಾಗ ಅಳವಡಿಸಿಕೊಳ್ಳುವ ಅವಕಾಶ ಶಿಕ್ಷಕರದ್ದಾಗಿದೆ. ಮಕ್ಕಳು ಸಾಧ್ಯವಾದಷ್ಟು ಸ್ವತಂತ್ರವಾಗಿರುವಂತೆ ಉತ್ತೇಜನ ನೀಡುವಲ್ಲಿ ಶಿಕ್ಷಕರು ಬಹಳ ಮುಖ್ಯ. ಮಕ್ಕಳು ತಾವಾಗಿಯೇ ಕೆಲಸಗಳನ್ನು ಮಾಡಲು ಇಷ್ಟಪಡುತ್ತಾರೆ. ಇದು ಮಕ್ಕಳ ಬೆಳವಣಿಗೆಗೆ ಸೂಕ್ತವೂ ಕೂಡ. ತಮಗೆ ಬೇಕಾದುದನ್ನು ಮಾಡಲು ಅವರಿಗೆ ಉತ್ತೇಜನವನ್ನು ನೀಡಬೇಕು. ಆಟವನ್ನು ಆಧರಿಸಿದ ವ್ಯವಸ್ಥೆಯು ಈ ವಿಧಾನವನ್ನು ಬೆಂಬಲಿಸುತ್ತದೆ.

ಮಕ್ಕಳ ಕಲಿಕೆ ಮತ್ತು ವಿಕಾಸವನ್ನು ಬೆಂಬಲಿಸಲು ಶಿಕ್ಷಕರ ಪಾತ್ರ ಅವಿಭಾಜ್ಯ ಅಂಗವಾಗಿರುತ್ತದೆ.. ಮಕ್ಕಳ ಆಟದ ಅವಧಿ ಮತ್ತು ಸಂಕೀರ್ಣತೆಯನ್ನು ವಿಸ್ತರಿಸುವಲ್ಲಿ ಶಿಕ್ಷಕರು ಬೆಂಬಲವನ್ನು ನೀಡುತ್ತಾರೆ. ಜೊತೆಗೆ ಮಕ್ಕಳು ತಮ್ಮ ಆಟದ ವ್ಯಾಪ್ತಿಯಲ್ಲಿ ಭಾಷೆ, ಶಿಕ್ಷಣ ಮತ್ತು ಗಣಿತಜ್ಞತೆಯನ್ನು ಸೇರಿಸುವಲ್ಲಿ ಮಕ್ಕಳನ್ನು ಉತ್ತೇಜಿಸುತ್ತಾರೆ (ಮೆಕ್-ಲೀನ್ 2016). ಪ್ರತಿಯೊಬ್ಬ ಮಗುವಿನ ಸಾಮರ್ಥ್ಯ, ಆಸಕ್ತಿ ಮತ್ತು ಆದ್ಯತೆಯನ್ನು ಶಿಕ್ಷಕರು ಪರಿಗಣಿಸಿದಾಗ ಅವರು ಎಲ್ಲರನ್ನು ಒಳಗೊಳ್ಳುವ ವಾತಾವರಣವನ್ನು ಸೃಷ್ಟಿಸುತ್ತಾರೆ. ಆಟದ ಮೂಲಕ ಕಲಿಕೆ ಮತ್ತು ವಿಕಾಸಕ್ಕೆ ಎಲ್ಲ ಮಕ್ಕಳನ್ನು ಪರಿಗಣಿಸಲು ವುಡ್ (2007) ಸಲಹೆ ನೀಡುವುದು- ಶಿಕ್ಷಕರು :

- ಸವಾಲೆನಿಸುವ ಕಲಿಕಾ ವಾತಾವರಣವನ್ನು ಯೋಜಿಸಿ, ಸಂಪನ್ಮೂಲ ಒದಗಿಸಿ ಮತ್ತು ಸೃಷ್ಟಿಸಬೇಕು
- ಆಟದ ಚಟುವಟಿಕೆಗಳ ಉದ್ದೇಶದ ಮೂಲಕ ಪ್ರತಿಯೊಂದು ಮಗುವಿನ ಕಲಿಕೆಗೆ ಬೆಂಬಲಿಸಬೇಕು
- ಸಹಜವಾಗಿರುವ ಆಟವನ್ನು ವಿಸ್ತರಿಸಿ ಮತ್ತು ಬೆಂಬಲಿಸುವುದು;
- ಆಟದಲ್ಲಿ ಪ್ರತಿ ಮಗುವಿನ ಸಂವಹನವನ್ನು ಬೆಳೆಸಿ ಮತ್ತು ವಿಸ್ತರಿಸಿ;
- ಆಟವನ್ನು ಮುಂದುವರಿಸಿ ಅದರ ಪ್ರಗತಿಯನ್ನು ಅನುಕೂಲಗಳಿಸುವ ಮೂಲಕ ಪ್ರತಿ ಮಗುವಿನ ಕಲಿಕೆಯ ಮೌಲ್ಯಮಾಪನ ಮಾಡುವುದು.
- ಮಗುವೇ ಪ್ರಾರಂಭಿಸುವ ಆಟವನ್ನು ಪ್ರೌಢ-ನಿರ್ದೇಶಿತ ಚಟುವಟಿಕೆಗಳೊಡನೆ ಸೇರಿಸುವುದು
- ಒಳಾಂಗಣ ಮತ್ತು ಹೊರಾಂಗಣ ವ್ಯವಸ್ಥೆಗಳೆರಡರಲ್ಲಿಯೂ ಅತ್ಯಂತ ಯೋಜಿತ, ಉದ್ದೇಶಪೂರ್ವಕ ಆಟಗಳಿಗೆ ಒತ್ತುನೀಡಿ.

- ಕೆಲಸ ಮತ್ತು ಆಟದ ಚಟುವಟಿಕೆಗಳ ನಡುವೆ ಸಂಬಂಧ ಇರುವಂತೆ ಯೋಜಿಸಿ
- ಕೆಲಸಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳಲು ಮಕ್ಕಳಿಗೆ ಕಾಲಾವಕಾಶ ನೀಡಿ; ಮತ್ತು
- ಮಕ್ಕಳು ಮತ್ತು ದೊಡ್ಡವರನ್ನು ಸಂಪರ್ಕಿಸುವ ಕೆಲಸಕ್ಕೆ ಸಹಾಯಕಗಳನ್ನು ನೀಡಿ

.

ಆಟವನ್ನು ಆಧರಿಸಿದ ಬೋಧನೆಯನ್ನು ನಿರ್ವಹಿಸುವಾಗ ಮಕ್ಕಳು ತಮ್ಮದೇ ರೀತಿಯಲ್ಲಿ ತಮ್ಮ ಜ್ಞಾನವನ್ನು ಸಂರಚಿಸಿಕೊಳ್ಳುವಾಗ ಮಾಡುವ ಶೋಧನೆಗಳನ್ನು ಶಿಕ್ಷಕರು ಗುರುತಿಸಲು ಸಾಧ್ಯವಾಗುತ್ತದೆ. (ಮ್ಯಾಕ್ಲೀನ್, 2016). ಒಂದು ಏಕೀಕೃತ ಕಾರ್ಯಕ್ರಮದಲ್ಲಿ, ಮಕ್ಕಳು ತಮ್ಮ ಸುತ್ತಲಿನ ಜಗತ್ತನ್ನು ಅರ್ಥೈಸಿಕೊಳ್ಳುತ್ತಿರುವಾಗ ಆಳ ಮತ್ತು ವಿಸ್ತೀರ್ಣ ಎರಡನ್ನೂ ಸೇರಿಸಿ ಪಠ್ಯಕ್ರಮದ ಉದ್ದೇಶಗಳನ್ನು ಪೂರೈಸಲಾಗುತ್ತದೆ. ಆಟವನ್ನು ಆಧರಿಸಿದ ಉಪಗಮನಗಳು, ಒಳಗೊಳ್ಳುವಿಕೆ ದೈನಂದಿನ ಜೀವನದ ಭಾಗವಾಗುವ ಹಾಗೆ ಮತ್ತು ವೈವಿಧ್ಯತೆಯನ್ನು ಸ್ವಾಗತಿಸಿ ಸಂಭ್ರಮಿಸುವ ಹಾಗೆ ಎಲ್ಲಾ ಕಲಿಕಾ ಸಾಧ್ಯತೆಗಳಿಗೆ ಸನ್ನಿವೇಶವನ್ನು ತೆರೆದಿಡುತ್ತದೆ.

## ಮುಕ್ತಾಯ

ಅವರ ಸಾಮರ್ಥ್ಯಕ್ಕೆ ಸಾಧ್ಯವಾದಷ್ಟು ಉತ್ತಮವಾಗಿ ಕಲಿಯುವ ಮತ್ತು ವಿಕಸನಗೊಳ್ಳುವ ಅವಕಾಶಗಳನ್ನು ಪಡೆಯುವುದು ಪ್ರತಿ ಮಗುವಿನ ಹಕ್ಕು. ಆರಂಭಿಕ ಬಾಲ್ಯದ ಶಿಕ್ಷಕರು ಶಿಶುಪಾಲನೆ ಮತ್ತು ಶಾಲಾ ವ್ಯವಸ್ಥೆ ಎರಡರಲ್ಲೂ ಅವನ್ನು ಬಳಸು ವೈವಿಧ್ಯತೆಯುಳ್ಳ ಮಕ್ಕಳು ಮತ್ತು ಕುಟುಂಬಗಳಿಗೆ ಪರಿಣಾಮಕಾರಿ, ಒಳಗೊಳ್ಳುವ ಅಧ್ಯಾಪನಶಾಸ್ತ್ರ ಹಾಗೂ ಕಾರ್ಯಕ್ರಮಗಳನ್ನು ಸುಲಭಗೊಳಿಸಬೇಕು ಎಂದಿದೆ. ವೈವಿಧ್ಯತೆಯುಳ್ಳ ತರಗತಿಗಳನ್ನು ಅಭಿವೃದ್ಧಿಪಡಿಸಲು ಬೇಕಾದ ಕಾರ್ಯತಂತ್ರಗಳು ಮತ್ತು ಚಿಂತನೆಗಳನ್ನು ಈ ಅಧ್ಯಾಯದಲ್ಲಿ ಸೂಚಿಸಲಾಗಿದೆ..

.

## ಅಂತಿಮ ಚಟುವಟಿಕೆಗಳು:

ನಿಮ್ಮ ತರಗತಿಯಲ್ಲಿಯೇ ಒಳಗೊಳ್ಳುವಿಕೆಯನ್ನು ನಿಭಾಯಿಸಲು ಕಾರ್ಯಸಾಧುವಾದ ಮತ್ತು ಕ್ರಿಯಾಶೀಲ ವಿಧಾನಗಳು ಬೇಕಾಗುತ್ತದೆ. ಮೇಲಿನ ಅಧ್ಯಾಯಗಳಲ್ಲಿ ಒದಗಿಸಲಾದ ಮಾಹಿತಿಗಳಿಗೆ ಪೂರಕವಾಗಿ ಆದ್ಯತೆಯ ಮೇಲೆ ಐದು ವಿಧಾನಗಳನ್ನು ಒದಗಿಸಲಾಗಿದೆ. ಹೆಚ್ಚು ಒಳಗೊಳ್ಳುವ ವಾತಾವರಣವನ್ನು ಸೃಷ್ಟಿಸಲು ಇವುಗಳನ್ನು ನೀವು ಬಳಸಿಕೊಳ್ಳಬಹುದು. ವೆಬ್-ತಾಣಗಳ ಮೂಲಕ ಒದಗಿಸಲಾದ ಸಂಪನ್ಮೂಲಗಳನ್ನು ಬಳಸಿಕೊಳ್ಳಬಹುದು. ನಿಮ್ಮ ಪಟ್ಟಿ ಇಲ್ಲಿದೆ:

## ಶಿಕ್ಷಕರಿಗೆ ಸಂಪನ್ಮೂಲಗಳು

ಕ್ವೀನ್ಸ್-ಲ್ಯಾಂಡ್ ಸರ್ಕಾರಿ ಶಾಲೆಗಳಲ್ಲಿ ಬಾಲ್ಯ ಶಿಕ್ಷಣದ ಶಿಕ್ಷಕರ ಉತ್ತಮ ಅಭ್ಯಾಸಕ್ರಮಗಳಿಗೆ ಮಾಡಲಾದ ಶಿಫಾರಸುಗಳು:

1. **ಬಾಂಧವ್ಯ ಬೆಳೆಸಿ**: ಬಾಲ್ಯದ ಕಲಿಕಾ ಚೌಕಟ್ಟಿನ ಅಭ್ಯಾಸಕ್ರಮಗಳನ್ನು ಆಧರಿಸಿದ ಸಂಪನ್ಮೂಲಗಳು- ಕುಟುಂಬಗಳೊಂದಿಗೆ ಸಂಪರ್ಕ: ನಿಮ್ಮ ಸಮುದಾಯದಲ್ಲಿ ಬಾಲ್ಯದ ಕಲಿಕಾ ಚೌಕಟ್ಟನ್ನು ಪರಿಚಯಿಸುವುದು (ಹೆಚ್ಚಿನ ಮಾಹಿತಿಗಾಗಿ: https://docs.education.gov.au/system/files/doc/other/connecting-with-families_0.pdf) ಇದು ಬಾಲ್ಯದ ಶಿಕ್ಷಕರಿಗೆ ಪ್ರಾಯೋಗಿಕವಾದ ಸಲಹೆಯನ್ನು ನೀಡುತ್ತದೆ. Evolve

Therapeutic Servicesನಿಂದ ಕ್ವೀನ್ಸ್-ಲ್ಯಾಂಡ್ ನಲ್ಲಿ ನೀಡಲಾಗುವ PACE ನಡವಳಿಕೆ ಸಂಬಂಧಿ ತರಬೇತಿ ಯಾತನೆ ಅಥವಾ ನಿರ್ಲಕ್ಷಕ್ಕೆ ಒಳಗಾದ ಮಕ್ಕಳೊಂದಿಗೆ ಕೆಲಸ ಮಾಡುವ ಶಿಕ್ಷಕರಿಗೆ ಅತ್ಯಂತ ಮೌಲ್ಯಯುತವಾದ ಸಂಪನ್ಮೂಲ, (ಹೆಚ್ಚಿನ ಮಾಹಿತಿಗಾಗಿ:

https://www.communities.qld.gov.au/childsafety/partners/our-governmentpartners/evolve-interagency-services).

2. **ಸಂಸ್ಕೃತಿಯೊಂದಿಗೆ ಸಂಪರ್ಕ**: ದೇಶೀಯರಲ್ಲದ ಶಿಕ್ಷಕರು ತಮ್ಮ ಶಾಲೆ ಅಥವಾ ದೊಡ್ಡ ಸಮುದಾಯದ ಒಳಗೆ ಇತರ ಅಬ್-ಒರಿಜಿನಲ್ ಆ್ಯಂಡ್ ಟೋರೆಸ್ ಸ್ಟ್ರೇಟ್ ಐಲ್ಯಾಂಡರ್ ಸಿಬ್ಬಂದಿಯಿಂದ ಸುರಕ್ಷಿತ, ವಿಶ್ವಾಸಾರ್ಹ ಸಂಸ್ಕೃತಿ ಸಂಬಂಧಿ ಮಾಹಿತಿಗಳನ್ನು ಪಡೆದುಕೊಳ್ಳಬೇಕು (ಡಾಕೆಟ್, ಪೆರ್ರಿ & ಕೀರ್ನಿ, 2010; ಲೆವಿಗ್ ಮತ್ತು ಇತರರು; ಜೋನ್ ಮತ್ತು ಇತರರು, 2004). ವೃತ್ತಿಪರ ಅಭ್ಯಾಸಕ್ರಮವು ಶಾಲೆಯ ವಿದ್ಯಾರ್ಥಿಗಳಲ್ಲಿ ಇರುವ ಇತರ ಅಲ್ಪಸಂಖ್ಯಾತ ಸಂಸ್ಕೃತಿಗಳನ್ನು ಪ್ರತಿಬಿಂಬಿಸಬೇಕು. (ಕೊರ್ಟಿಸ್ ಮತ್ತು ಇತರರು, 2009, ಗಿಲಿಗನ್ & ಅಖ್ತರ್, 2005; ಹಂಡೀಡ್ ಮತ್ತು ಆರ್ಮ್-ಸ್ಟ್ರಾಂಗ್, 2011; ಲೈಬ್ಸ್-ಮ್ಯಾನ್, 2004; ರೆಯಾನ್, 2011). ಇನ್ನಷ್ಟು ಮಾಹಿತಿಗಾಗಿ Foundations for Success ವೆಬ್ ತಾಣವನ್ನು ನೋಡಿ:

https://det.qld.gov.au/earlychildhood/service/Documents/pdf/foundations-for-success.pdf#search=crossing%20cultures%20training%20teachers.

ಜೊತೆಗೆ ಕ್ವೀನ್ಸ್-ಲ್ಯಾಂಡ್ ಸರ್ಕಾರಿ ಶಾಲಾ ಶಿಕ್ಷಕರು ವಿಭಿನ್ನ ಸಂಸ್ಕೃತಿಗಳು ಗುಪ್ತ ಇತಿಹಾಸ ತರಬೇತಿಯನ್ನು ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ:

http://indigenous.education.qld.gov.au/school/crossingcultures/Pages/default.aspx

3. **ವರ್ತನೆಯನ್ನು ಪರಿಣಾಮಕಾರಿಯಾಗಿ ನಿಭಾಯಿಸುವುದು:** ಆದರ್ಶಪ್ರಾಯವಾದ ಸಾಮಾಜಿಕವಾಗಿ ಒಪ್ಪಿತವಾದ ಪ್ರತಿಕ್ರಿಯೆಗಳಿಗಾಗಿ ವಾಸ್ತವಿಕ ಮತ್ತು ಜೀವಸದೃಶವಾದ ಮಾದರಿಗಳನ್ನು ಬಳಸುವುದು.(ಡೋಯಲ್, 2012; ಹೋವ್, 2005).ದಿನಚರಿಗಳು, ವೇಳಪಟ್ಟಿಗಳು ಮತ್ತು ಬಹುಮಾನದ ವ್ಯವಸ್ಥೆಗಳನ್ನು ಸ್ಥಾಪಿಸು ಮತ್ತು ನಿರ್ವಹಣೆ ಮಾಡುವುದು (ಗ್ರಾಸ್ ಮತ್ತು ಇತರರು, 2006; ಕಾರ್, ಮೋರ್ಸ್ & ವಿಲ್ಲಿ, 1997). ಕ್ವಿನ್ಸ್-ಲ್ಯಾಂಡ್ ಸರ್ಕಾರಿ ಶಾಲೆಯಲ್ಲಿ ಪ್ರಸ್ತುತ ಕಲಿಕೆಗಾಗಿ ಧನಾತ್ಮಕ ನಡವಳಿಕೆ (ಪಿಬಿಎಲ್) ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. (http://behaviour.education.qld.gov.au/Pages/default.aspx) ಮತ್ತು ಇದನ್ನು ಸವಾಲಿನ ನಡವಳಿಕೆ ಹೊಂದಿರುವ ಮಕ್ಕಳಿಗೂ ಇದನ್ನು ಶಿಫಾರಸು ಮಾಡಲಾಗಿದೆ (ಡಿಇಟಿ, 2015; ಉಬ್ರೀಟ್ & ಫೆರೊ, 2015)

4. **ಶಾಲಾ ಮಟ್ಟದಲ್ಲಿ ಸಹಾಯ ಮತ್ತು ಬೆಂಬಲ:** ಕ್ವೀನ್ಸ್-ಲ್ಯಾಂಡ್ ಸರ್ಕಾರಿ ಶಾಲೆಗಳು ಶಾಲೆಗಳು ವಿಶೇಷ ತಜ್ಞರ ನೆರವನ್ನು ಪಡೆಯುವ ಅವಕಾಶವನ್ನು ಹೊಂದಿವೆ. ಇದರಲ್ಲಿ ಮಾತು/ಭಾಷೆ ಸಂಬಂಧಿ ತಜ್ಞರು, ನಡವಳಿಕೆ ತರಬೇತಿದಾರರು, ಔದ್ಯೋಗಿಕ ತರಬೇತಿದಾರರು, ಮಾರ್ಗದರ್ಶಿ ಅಧಿಕಾರಿಗಳು ಮತ್ತು ಕಲಿಕೆಗೆ ನೆರವಾಗುವ ಶಿಕ್ಷಕರು ಸೇರಿದ್ದಾರೆ. (ಹೆಚ್ಚಿನ ಮಾಹಿತಿಗಾಗಿ:

https://education.qld.gov.au/students/students-with-disability/specialiststaff

ಹೆಚ್ಚು ಗೈರುಹಾಜರಿ ಅಥವಾ ಶಿಶು ನಿಂದನೆ ಅಥವಾ ದೌರ್ಜನ್ಯ ಅಥವಾ ನಿರ್ಲಕ್ಷ್ಯವಿದ್ದರೆ ಶಾಲೆಯ ಪ್ರಿನ್ಸಿಪಾಲ್ ಅವರನ್ನು ಸಂಪರ್ಕಿಸುವುದು: ಹೆಚ್ಚಿನ ಮಾಹಿತಿಗೆ:

https://oneportal.deta.qld.gov.au/Students/studentprotection/Pages/
(ಹೆಚ್ಚಿನ ಮಾಹಿತಿಗೆ: ವಿದ್ಯಾರ್ಥಿ ಸುರಕ್ಷತಾ ನಿಬಂಧನೆ ಮತ್ತು ಮಾರ್ಗದರ್ಶಿ. Student protection procedure and guidelines.aspx).
ವ್ಯವಸ್ಥೆಯನ್ನು ಬೆಂಬಲಿಸಲು ಸಂಪೂರ್ಣ ವಿಧಾನಕ್ಕಾಗಿ (ಕಾರ್ಟಿಸ್ ಮತ್ತು ಇತರರು Cortis et al., 2009). ಇದರಲ್ಲಿ ಶಾಲೆಯು ನಾನಾ ಸಮುದಾಯ ಆಧಾರಿತ ಬೆಂಬಲವನ್ನು ಹೊಂದಿದ ಸಂಸ್ಥೆಗಳ ಜೊತೆಗೆ ಸಮನ್ವಯ ಮತ್ತು ಸಹಕಾರ (Cortis et al., 2009 The HIPPY–ಹೆಚ್ಚಿನ ಮಾಹಿತಿಗಾಗಿ http://hippyaustralia.bsl.org.au/) ಮತ್ತು FAFT (Families as First Teachers) ಕಾರ್ಯಕ್ರಮಗಳು (ಹೆಚ್ಚಿನದ ಮಾಹಿತಿಗಾಗಿ:
http://www.earlyyearscount.earlychildhood.qld.gov.au/age-spaces/families-first-teachers/)
ಪಾಲಕರು ಮತ್ತು ಮಕ್ಕಳ ನಡುವಿನ ಬೆಂಬಲದಲ್ಲಿ ಮತ್ತು ಶಾಲಾ ವ್ಯವಸ್ಥೆಗೆ ಮಗುವಿನ ಪರಿವರ್ತನೆಯಲ್ಲಿ ಅತ್ಯುತ್ತಮವೆಂದು ಭಾವಿಸಲಾದ ಭಾಷೆ ಮತ್ತು ಸಂವಹನ ಅಭಿವೃದ್ಧಿಗೆ ಕುಟುಂಬಗಳಿಗೆ ಸಹಾಯ. (Dean & Leung, 2010).
ಕುಟುಂಬಗಳ ಜೊತೆಗೆ ಕಾರ್ಯ ನಿರ್ವಹಿಸುವುದು ಶಿಕ್ಷಕರು ಮತ್ತು ಪಾಲಕರು ಹಾಗೂ ಅಪಾಯದಲ್ಲಿರುವ ಮಕ್ಕಳಿಗೆ ಅತ್ಯುತ್ತಮ ಅಭ್ಯಾಸಕ್ರಮ ಎಂದು ಪರಿಗಣಿಸಲಾಗಿದೆ: (DiLauro, 2004; Karr-Morse & Wiley, 1997).

5. **ಹೆಚ್ಚುವರಿ ಅಗತ್ಯಗಳಿರುವ ಮಕ್ಕಳಿಗೆ ಬೆಂಬಲ**. Early Years Connect ಎಂಬುದು ಕ್ವೀನ್ಸ್-ಲ್ಯಾಂಡ್ ಸರ್ಕಾರದ ಶಿಕ್ಷಣ ಇಲಾಖೆಯು ಬಾಲ್ಯದ ಶಿಕ್ಷಣ ಮತ್ತು ಪಾಲನೆಗಾಗಿ ಅಭಿವೃದ್ಧಿಪಡಿಸಿದ ವೆಬ್ಸೈಟ್. ಬಾಲ್ಯ ಶಿಕ್ಷಣ ವ್ಯವಸ್ಥೆಯಲ್ಲಿ ಭಾಗವಹಿಸಲು ಶಿಕ್ಷಕರಿಗೆ ಸಹಾಯ ಮಾಡುವುದು ಈ ವೆಬ್-ತಾಣದ ಉದ್ದೇಶ. ಇದರಲ್ಲಿ ಮಾಹಿತಿ ಪಟ್ಟಿ, ಆನ್ಲೈನ್ ಮಾದರಿಗಳು ಮತ್ತು ವೆಬಿನಾರ್ ರೆಕಾರ್ಡಿಂಗ್ ಗಳು ಮುಂತಾದ ಸಂಪನ್ಮೂಲಗಳು ಸೇರಿವೆ.

6. **ಸಂಕೀರ್ಣ ಮತ್ತು ಹೆಚ್ಚುವರಿ ಅಗತ್ಯಗಳು**. The Early Years Health and Development Connect ಎಂಬುದು ಕ್ವೀನ್ಸ್-ಲ್ಯಾಂಡ್ ಸರ್ಕಾರದ ಶಿಕ್ಷಣ ಇಲಾಖೆಯು ಬಾಲ್ಯದ ಶಿಕ್ಷಣ ಮತ್ತು ಪಾಲನೆಗಾಗಿ ಅಭಿವೃದ್ಧಿಪಡಿಸಿದ ವೆಬ್ಸೈಟ್. ಬಾಲ್ಯ ಶಿಕ್ಷಣ ವ್ಯವಸ್ಥೆಯಲ್ಲಿನ ಒಳಗೊಳ್ಳುವ ಅಭ್ಯಾಸಕ್ರಮಕ್ಕೆ ಪೂರಕವಾದ ಅನೇಕ ಲಿಂಕ್-ಗಳು ಈ ವೆಬ್ ತಾಣದಲ್ಲಿ ಲಭ್ಯ.

## ಉಲ್ಲೇಖಗಳು


Arber, R. (2005). Speaking of race and ethnic identities: Exploring multicultural curricula.

*Journal of Curriculum Studies 37*(6), 33–652. doi: 0.1080/00220270500038586
Ashman, A., & Elkins, J. (2005). *Educating children with diverse abilities* (2nd ed.).
Frenchs Forest, NSW: Pearson. Australian Children's Education and Care Quality Authority (ACECQA). (2017).

*Guide to the National Quality Framework*. Sydney, NSW: ACECQA. Booth, T., Ainscow, M., & Kingston, D. (2006).

*Index for inclusion: Developing play, learning and participation in early years and childcare*. Bristol: Centre for Studies in Inclusive Education.

Bronfenbrenner, U. (1979). *The ecology of human development: Experiments by nature and design.* Cambridge, MA: Harvard University Press.

Brown, W., Odom, S., McConnell, S., & Rathel, J. (2008). Peer interactions for preschool children with developmental difficulties. In W. B. Brown, S. L. Odom, & S. R. McConnell (Eds.), *Social Competence of Young Children with Disabilities: Risk, Disability, and Intervention*(pp. 141-164). Baltimore, MD: Paul H. Brookes.

Centre on the Developing Child. (2011). *Building the brain's air traffic control system: How early experiences shape the development of executive function.*Working Paper No. 11. Retrieved from http://www.developingchild.harvard.edu

Caruana, C., & McDonald, M. (2018) *Social inclusion in the family support sector*. (online) Canberra, ACT: Australian Institute of Family Services. Retrieved from: https://aifs.gov.au/cfca/publications/social-inclusionfamily-support-sector/export

Colville, M. (2018). Observation-based planning. Chap 11 pg 319-354. In Estelle Irving & Carol Carter, *The Child in focus: Learning and teaching in early childhood education* pp. 319-354). South Melbourne, VIC: Oxford Press.

Coyne, M., Kame'enui, D., & Carnine, D. (2007). *Effective teaching strategies that accommodate diverse learners*. Upper Saddle River, NJ: Pearson.

Dahlberg, G., Moss, P., & Pence, A. (2007*). Beyond quality in early childhood education and care: Languages of evaluation* (2nd ed.). London, England: Falmer Press

Dearing, E., McCartney, K., & Taylor, B. (2009). Does higher quality early child care promote low-income children's math and reading achievement in middle childhood? *Child Development, 80*(5), 1329-1349. doi:10.1111/j.1467-8624.2009.01336.x

Dempsey, I., & Arthur-Kelly, M. (2008). *Maximizing learning outcomes in diverse classrooms*. South Melbourne, Victoria: Thomson.

Department of Education, Employment and Workplace Relations. (2009). *Belonging, Being and Becoming: The*